MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

YUVA MARGA NEWS PAPER
VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 05 | ಸಂಚಿಕೆ: 45 | ಬುಧವಾರ :03-12-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 05 | ISSUE: 45 | WEDNESDAY : 03-12-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ಸ್ಮಾರ್ಟ್ ಮೀಟರ್ ಅಕ್ರಮ ಆರೋಪ ವಜಾ : ಇಂಧನ ಸಚಿವ ಕೆ.ಜೆ. ಜಾರ್ಜ್ ನಿರಾಳ



**ಬೆಂಗಳೂರು,ಡಿ.2**–ರಾಜ್ಯದಲ್ಲಿ ಸಾರ್ಟ್ ಮೀಟರ್ ಅಳವಡಿಕೆಗೆ ಸಂಬಂಧಿಸಿದ ಟೆಂಡರ್‌ನಲ್ಲಿ ಅಕ್ರಮ ನಡೆದಿರುವುದಕ್ಕೆ ಸಂಬಂಧಿಸಿದಂತೆ ಇಂಧನ ಸಚಿವ ಕೆ.ಜೆ. ಜಾರ್ಜ್ ಸೇರಿದಂತೆ ಅಧಿಕಾರಿಗಳ ವಿರುದ್ಧ ಬಿಜೆಪಿ ನಾಯಕರು ಹೂಡಿದ್ದ ಖಾಸಗಿ ದೂರನ್ನು ಕರ್ನಾಟಕ ಹೈಕೋರ್ಟ್ ವಜಾಗೊಳಿಸಿದೆ.

ಇದರಿಂದ ಸಾವಿರಾರೂ ಕೋಟಿ ಅಕ್ರಮದ ಆರೋಪ ಮಾಡಿದ್ದ ಬಿಜೆಪಿ ನಾಯಕರಿಗೆ ಮುಖಭಂಗವಾಗಿದ್ದು, ಸಚಿವ ಜಾರ್ಜ್ ನಿರಾಳರಾಗಿದ್ದಾರೆ.ಬಿಜೆಪಿ ನಾಯಕರು ಸಲ್ಲಿಸಿದ್ದ ಈ ಪ್ರಕರಣದಲ್ಲಿ ನ್ಯಾಯಮೂರ್ತಿ ಎಂ.ಐ. ಅರುಣ್ ಅವರಿದ್ದ ಹೈಕೋರ್ಟ್ ಪೀಠವು, ಸಚಿವ ಕೆ.ಜೆ.ಜಾರ್ಜ್ ವಿರುದ್ಧದ ಖಾಸಗಿ ದೂರನ್ನು ರದ್ದುಪಡಿಸಿ ಆದೇಶ ಹೊರಡಿಸಿದೆ. ಜಾರ್ಜ್ ಅವರ ಜೊತೆಗೆ ಇಂಧನ ಇಲಾಖೆಯ ಗೌರವ್ ಗುಪ್ತ, ಬೆಸ್ಕಾಂನ ಮಹಾಂತೇಶ ಬೀಳಗಿ ಹಾಗೂ ಹೆಚ್.ಜೆ. ರಮೇಶ್ ವಿರುದ್ಧದ ಪ್ರಕರಣಗಳನ್ನೂ ಹೈಕೋರ್ಟ್ ರದ್ದುಪಡಿಸಿದೆ.

ಕ್ರಿಮಿನಲ್ ಅರ್ಜಿಗಳನ್ನು ತಿರಸ್ಕರಿಸಲಾಗಿದ್ದು, ವಿಚಾರಣಾಧೀನ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕ್ರಿಯೆಯನ್ನು ವಜಾಗೊಳಿಸಲಾಗಿದೆ. ಮೂರನೇ ಪ್ರತಿವಾದಿಯಾಗಿದ್ದ ಐಎಎಸ್? ಅಧಿಕಾರಿ ಮಹಾಂತೇಶ್ ಬೀಳಗಿ ಈಚೆಗೆ ರಸ್ತೆ ಅಪಘಾತದಲ್ಲಿ ನಿಧನರಾದ ಹಿನ್ನೆಲೆಯಲ್ಲಿ ಅವರ ವಿರುದ್ಧದ ಪ್ರಕರಣ ಕೈಬಿಡಲಾಗಿದೆ ಎಂದು ನ್ಯಾಯಾಲಯ ಆದೇಶಿಸಿತು.

ಅರ್ಜಿದಾರರನ್ನು ಪ್ರತಿನಿಧಿಸಿದ್ದ ಹಿರಿಯ ವಕೀಲ ಸಿ.ವಿ.ನಾಗೇಶ್ ಅವರು ಪ್ರಕರಣದಲ್ಲಿ ಆರೋಪಿಗಳಾಗಿರುವವರು ಮಂತ್ರಿಯೂ ಸೇರಿದಂತೆ ಸಾರ್ವಜನಿಕ ಸೇವಕರಾಗಿದ್ದಾರೆ. ಪ್ರಾಸಿಕ್ಯೂಷನ್ ಆರಂಭಿಸಿ, ಸಂಜ್ಞೇ ಪರಿಗಣಿಸಿದಾಗ ಸಾರ್ವಜನಿಕ ಸೇವಕರಿಗೆ ಎರಡು ಹಂತದಲ್ಲಿ ರಕ್ಷಣೆ ಇರುತ್ತದೆ. ಸಾರ್ವಜನಿಕ ಸೇವಕರಿಗೆ ಭ್ರಷ್ಟಾಚಾರ ಪ್ರತಿಬಂಧಕ ಕಾಯಿದೆ ಸೆಕ್ಷನ್ 17ರ ಡಿ ರಕ್ಷಣೆ ಇರುತ್ತದೆ. ಈ ಆಕ್ಷೇಪಾರ್ಹವಾದ ಆದೇಶವನ್ನು ಮಾಡುವಂತೆಯೇ ಇಲ್ಲ.

ನಾವು ನಿರ್ಧಾರ ಕೈಗೊಂಡಿರುವುದರಿಂದ ಅಪರಾಧ ಆರಂಭವಾಗಿದೆ ಎಂದು ಆರೋಪಿಸಲಾಗಿದೆ. ಆದರೆ ಪಿಸಿ ಕಾಯಿದೆ ಸೆಕ್ಷನ್ 17ರಡಿ ಪೂರ್ವಾನುಮತಿ ಇಲ್ಲದೇ ಸಾರ್ವಜನಿಕ ಸೇವಕರ ವಿರುದ್ಧ ಯಾವುದೇ ಪೊಲೀಸ್ ಅಧಿಕಾರಿ ತನಿಖೆ ನಡೆಸುವಂತಿಲ್ಲ ಎಂದು ಕಾಯಿದೆ ಹೇಳುತ್ತದೆ. ಇಲ್ಲಿ ವಿಚಾರಣಾಧೀನ ನ್ಯಾಯಾಲಯವು ಅವಕಾಶ ಇಲ್ಲದಿದ್ದರೂ ವರದಿ ಕೇಳಿದೆ ಎಂದಿದ್ದರು.

ದೂರುದಾರರಾದ ಬಿಜೆಪಿ ನಾಯಕರ ಪರ ಹಿರಿಯ ವಕೀಲೆ ಲಕ್ಷ್ಮಿ ಐಯ್ಯಂಗಾರ್ ಅವರು ಲೋಕಾಯುಕ್ತ **(2ನೇಪುಟಕ್ಕೆ)**

## ಸಾಮಾಜಿಕ ಜಾಲತಾಣ ಬಳಕೆ ಮಿತಿಯಲ್ಲಿರಲಿ : ಡಿವೈಎಸ್‌ಪಿ ವೆಂಕಟೇಶ



ಯುವಮಾರ್ಗ ಸುದ್ದಿ

**ಮಾನ್ವಿ,ಡಿ.2**–ಪಟ್ಟಣದ ಕೆ.ಪಿ.ಎಸ್.ವಿ,ಎಸ್,ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ಹಾಗೂ ಆಸ್ಪತ್ರೆ ಸಭಾಂಗಣದಲ್ಲಿ ರಾಯಚೂರು ಜಿಲ್ಲಾ ಸೈಬರ್ ಕ್ರೈಂ ವಿಭಾಗದಿಂದ ನಡೆದ ಸೈಬರ್ ಕ್ರೈಂ ಜಾಗೃತಿ ಕಾರ್ಯಕ್ರಮದಲ್ಲಿ ರಾಯಚೂರು ಜಿಲ್ಲಾ ಸೈಬರ್ ಕ್ರೈಂ ವಿಭಾಗದ ಡಿ.ವೈ.ಎಸ್.ಪಿ. ವೆಂಕಟೇಶ್ ಹೊಗಿಬಂಡಿ ಮಾತನಾಡಿ, ಇಂದು ಪ್ರತಿಯೊಬ್ಬರ ವೈಯುಕ್ತಿಕ ಹಾಗೂ ಖಾಸಗಿ ವಿಷಯಗಳು ಇಂದು ಖಾಸಗಿಯಾಗಿ ಉಳಿದಿಲ್ಲ ಅದ್ದಕ್ಕೆ ನಾವೆಲ್ಲರು ಬಳಸುತ್ತಿರುವ ಸಾಮಾಜಿಕ ಜಾಲತಾಣಗಳೆ ಕಾರಣ ಹಿಂದಿನ ದಿನಗಳಲ್ಲಿ ದರೋಡೆ,ಕಳ್ಳತನ ಪ್ರಕರಣಗಳಲ್ಲಿ ಸಾರ್ವಜನಿಕರು ಹೆಚ್ಚಿನ ಪ್ರಮಾಣದಲ್ಲಿ ಹಣ ಮತ್ತು ಒಡವೆ ಕಳೆದುಕೊಳ್ಳುತ್ತಿದ್ದರು. ಅದರೆ ಇಂದಿನ ದಿನಗಳಲ್ಲಿ ಹೆಚ್ಚಿನ ಜನರು ಅಂಡ್ರೈಡ್ ತಂತ್ರಜ್ಞಾನ ಉಳ್ಳ ಮೊಬೈಲ್‌ಗಳನ್ನು ಬಳಸುತ್ತಿರುವುದರಿಂದ ಅಜ್ಞಾತ ವ್ಯಕ್ತಿಗಳು,ಅಜ್ಞಾತ ಸ್ಥಳಗಳಲ್ಲಿ ಕುಳಿತು ನಿಮ್ಮ ಬಳಿಯಿರುವ ಹಾಗೂ ಖಾತೆಗಳಲ್ಲಿರುವ ಹಣವನ್ನು ಹಾಗೂ ನಿಮ್ಮ ವೈಯುಕ್ತಿಕ ಬದುಕಿನ ಎಲ್ಲಾ ಮಾಹಿತಿಗಳನ್ನು ಸೈಬಾರ್ ಪ್ರಾಡ್‌ಕ್ಸ್ ಸುಲಭವಾಗಿ ಕದಿಯುತ್ತಿದ್ದಾರೆ ಹಾಗೂ ನಿಮಗೆ ಆರ್ಥಿಕ ನಷ್ಟದ ಜೊತೆಗೆ ವೈಯುಕ್ತಿಕ ಹಾಗೂ ಮಾನಸಿಕ,ಸಮಾಜಿಕ ಶೋಷಣೆ ಮಾಡುತ್ತಿರುವುದರಿಂದ ಪ್ರತಿಯೊಬ್ಬರು ಕೂಡ ಸಮಾಜಿಕ ಜಾಲತಾಣಗಳನ್ನು ಹಿತಮಿತವಾಗಿ ಬಳಸಬೇಕು ಯಾವುದೆ ಕಾರಣಕ್ಕೂ ಕೂಡ ನಿಮ್ಮ ವೈಯುಕ್ತಿಕವಾದ ಮಾಹಿತಿಯನ್ನು ಅಪರಿಚಿತರೊಂದಿಗೆ ಹಂಚಿಕೊಳ್ಳಬರದು, ನಿಮ್ಮಗೆ ಫೋನ್ ಮೂಲಕ ನಿಮ್ಮ ಖಾತೆಗೆ ಸಂಬಂದಿಸಿದಂತೆ ಕೆ.ವೈ.ಸಿ, ಗೆ ಸಂಬಂದಿಸಿದ ಮಾಹಿತಿಯನ್ನು ಹಂಚಿಕೊಳ್ಳದೆ ನಿಮ್ಮ ಖಾತೆಯುಳ್ಳ ಬ್ಯಾಂಕ್‌ಗೆ ಹೋಗಿ ವೈಯುಕ್ತಿಕವಾಗಿ ನೀಡಬೇಕು ಯಾವುದೆ ಕಾರಣಕ್ಕೂ ದೂರವಾಣಿಯಲ್ಲಿ ಒ.ಟಿ.ಪಿ.ಸಂಖ್ಯೆಯನ್ನು ಹೇಳಬರಾದು, ಅನ್ಲೈನ್ ಚಾಟ್ ಮಾಡುವಾಗ ಜಾಗ್ರತೆಯಿಂದ ಇರಬೇಕು,ಆನ್ ಲೈನ್ ಶಾಪಿಂಗ್ ಮಾಡುವಾಗ ಎಚ್ಚರವಾಗಿರಬೇಕು ಹಾಗೂ ನಿಮ್ಮ ವೈಯುಕ್ತಿಕ ಮಾಹಿತಿ ನೀಡಬಾರದು, ಶಾಫಿಂಗ್ **(2ನೇಪುಟಕ್ಕೆ..)**

## ಬೆಳೆ ಸಮೀಕ್ಷೆದಾರರ ಬೇಡಿಕೆ: ಬೆಳಗಾವಿ ಅಧಿವೇಶನದಲ್ಲಿ ಧ್ವನಿ ಎತ್ತಲು ಶಾಸಕರಿಗೆ ಮನವಿ

ಯುವಮಾರ್ಗ ಸುದ್ದಿ




**ದೇವದುರ್ಗ,ಡಿ.2**– ಕರ್ನಾಟಕ ರಾಜ್ಯದ ಬೆಳೆ ಸಮೀಕ್ಷೆದಾರರ ಹಿತಾಸಕ್ತಿಗಳನ್ನು ಕಾಪಾಡಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವಂತೆ ಆಗ್ರಹಿಸಿ, ದೇವದುರ್ಗದ ಬೆಳೆ ಸಮೀಕ್ಷೆಗಾ ರರ ಸಂಘದ ವತಿಯಿಂದ ಸ್ಥಳೀಯ ಶಾಸಕಿ ಮತಿ ಕರೆಮ್ಮ ಜಿ. ನಾಯಕರವರಿಗೆ ಮನವಿ ಸಲ್ಲಿಸಲಾಯಿತು. ಮುಂಬರುವ ಬೆಳಗಾವಿ ಅಧಿವೇಶನದಲ್ಲಿ ಬೆಳೆ ಸಮೀಕ್ಷೆದಾರರ ಪರವಾಗಿ ಧ್ವನಿ ಎತ್ತುವಂತೆ ಸಂಘದ ಸದಸ್ಯರು ಮನವಿ ಮಾಡಿಕೊಂಡರು.

ತಾಲೂಕು ಪಂಚಾಯಿತಿ ಆವರಣದಲ್ಲಿ ಶಾಸಕರಿಗೆ ಮನವಿ ಸಲ್ಲಿಸಿದ ಸಂಘದ ಸದಸ್ಯರು, ರಾಜ್ಯದಲ್ಲಿ ಕಳೆದ ಸುಮಾರು ಎಂಟು ವರ್ಷಗಳಿಂದ ಬೆಳೆ ಸಮೀಕ್ಷೆದಾರರಾಗಿ ನಿರಂತರ ಸೇವೆ ಸಲ್ಲಿಸುತ್ತಾ ಬಂದಿದ್ದೇವೆ ಎಂದು ತಿಳಿಸಿದರು.

"ನಾವು ಕಂದಾಯ ಇಲಾಖೆ, ಕೃಷಿ ಇಲಾಖೆ ಹಾಗೂ ರೈತರ ನಡುವೆ ಮಹತ್ವದ ಕೊಂಡಿಯಾಗಿ ಶ್ರಮಿಸುತ್ತಿದ್ದೇವೆ. ಮಳೆಗಾಲ, ಚಳಿಗಾಲ, ಬೇಸಿಗೆಯನ್ನು ಲೆಕ್ಕಿಸದೆ, ಎದೆ ಎತ್ತರ ಬೆಳೆದ ಬೆಳೆಗಳ ನಡುವೆ ಜೀವದ ಅಪಾಯದಲ್ಲಿ ಸಮೀಕ್ಷೆ ಕಾರ್ಯ ನಿರ್ವಹಿಸುತ್ತಿದ್ದೇವೆ. ಈ ಸಂದರ್ಭದಲ್ಲಿ ಅನೇಕ ತೊಂದರೆ ಮತ್ತು ತಾಪತ್ರಯಗಳನ್ನು ಎದುರಿಸುತ್ತಿದ್ದೇವೆ" ಎಂದು ಬೆಳೆ ಸಮೀಕ್ಷೆದಾರರು ಅಳಲು ತೋಡಿಕೊಂಡರು.

ಸಭೆಯಲ್ಲಿ ಬೆಳೆ ಸಮೀಕ್ಷೆದಾರರು, ಸೀಮಿತ ಕಾರ್ಮಿಕರಾಗಿರುವ ತಮಗೆ ಕನಿಷ್ಠ ವೇತನವನ್ನು ನಿಗದಿ ಮಾಡಬೇಕು, ಹಾಗೂ ಬೆಳೆ ಸಮೀಕ್ಷೆದಾರರನ್ನು ದಿನಗೂಲಿ ಕಾರ್ಮಿಕರನ್ನಾಗಿ ನೇಮಕ ಮಾಡಿಕೊಳ್ಳಬೇಕು ಮತ್ತು ಕರ್ತವ್ಯ ನಿರ್ವಹಣೆಗೆ ಅಗತ್ಯವಿರುವ ಮೂಲ ಸೌಕರ್ಯಗಳನ್ನು ಒದಗಿಸಬೇಕು ಎಂಬ ಪ್ರಮುಖ ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತರುವಂತೆ ಶಾಸಕರಿಗೆ ಕೋರಿದರು.ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ನಾಗರಾಜ ಪಾಟೀಲ್, ಉಪಾಧ್ಯಕ್ಷ ಹನುಮಂತ್ರಾಯ ದೊರೆ, ಪ್ರಧಾನ ಕಾರ್ಯದರ್ಶಿ ರಾಜು ಸಂಘಟನೆ, ಸಹ ಕಾರ್ಯದರ್ಶಿ ಹನುಮೇಶ ನಾಯಕ ಹಾಗೂ ಸದಸ್ಯರಾದ ನಿಂಗಯ್ಯ, ಚಂದ್ರು, ಚನ್ನಪ್ಪ, ಸಂಗಮೇಶ, ಶಿವಪ್ಪ ಮತ್ತು ಇನ್ನಿತರರು ಉಪಸ್ಥಿತರಿದ್ದರು.

## ಎಚ್‌ಆರ್ ನೀತಿಗೆ ಗುತ್ತಿಗೆ–ಹೊರಗುತ್ತಿಗೆ ನೌಕರರ ಸಂಘಗಳ ವಿರೋಧ :ಎಂಎಲ್‌ಸಿಗೆ ಮನವಿ

ಯುವಮಾರ್ಗ ಸುದ್ದಿ



**ಸಿಂಧನೂರು,ಡಿ.2**–ನೂತನ ಮಾನವ ಸಂಪನ್ಮೂಲ ನೀತಿ ತಕ್ಷಣ ಹಿಂಪಡೆಯಲು ಸೂಕ್ತ ಕ್ರಮವಹಿಸಬೇಕು ಎಂದು ಆರೋಗ್ಯ ಇಲಾಖೆ ಸಿಬ್ಬಂದಿಗಳು ಒತ್ತಾಯಿಸಿದರು.

ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಪ್ರಸ್ತಾಪಿಸಿರುವ ನೂತನ ಮಾನವ ಸಂಪನ್ಮೂಲ ನೀತಿಯನ್ನು ತಕ್ಷಣ ಹಿಂಪಡೆಯುವಂತೆ ಒತ್ತಾಯಿಸಿ ಮಂಗಳವಾರ ಗುತ್ತಿಗೆ ನೌಕರರು ಆರೋಗ್ಯ ಇಲಾಖೆಯ ಗುತ್ತಿಗೆ–ಹೊರಗುತ್ತಿಗೆ ನೌಕರರ ಸಂಘಗಳು ವಿಧಾನಪರಿಷತ್ ಸದಸ್ಯ ಬಸವನಗೌಡ ಬಾದರ್ಲಿ ರವರಿಗೆ ಮನವಿ ಪತ್ರ ನೀಡಿ ನೌಕರ ಸಹಾಯಕ್ಕೆ ಬರಲು ಒತ್ತಾಯಿ ಸಿದರು.

ರಾಷ್ಟ್ರೀಯ ಆರೋಗ್ಯ ಅಭಿಯಾನ ( ದಡಿಯಲ್ಲಿ ಸುಮಾರು 30 ಸಾವಿರ ಗುತ್ತಿಗೆ ನೌಕರರು 18–20 ವರ್ಷಗಳಿಂದ ಕಡಿಮೆ ವೇತನದಲ್ಲಿ ಯಾವೂದೆ ಸರ್ಕಾರಿ ನೌಕರರಿಗೆ ಸಿಗುವ ಭತ್ಯೆಗಳನ್ನು ಪಡೆಯದೆ ಸೇವೆ ಸಲ್ಲಿಸುತ್ತಿದ್ದು, ಹೊಸ ನೀತಿಯಡಿ ಕಡ್ಡಾಯ ವರ್ಗಾವಣೆ ಮತ್ತು ಮರು ನೇಮಕಾತಿ ಮಾಡಲಿರುವುದು ನೌಕರರ ಭವಿಷ್ಯಕ್ಕೆ ದೊಡ್ಡ ಹೊಡೆತವಾಗಿದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು.

ದಶಕಗಳ ಸೇವೆಯ ನಂತರವೂ ನೌಕರಿಯ ಭರವಸೆ ನೀಡದೇ, ಮರು ನೇಮಕಾತಿಯ ಹೆಸರಿನಲ್ಲಿ ಮನೆಗೆ ಕಳುಹಿಸುವ ಹುನ್ನಾರ ನಡೆದಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.ನೌಕರರ ನ್ಯಾಯಯುತ ಬೇಡಿಕೆಗಳಿಗೆ , ಹಿತಾಸಕ್ತಿಗೆ ಧಕ್ಕೆಯಾಗುವ ಕ್ರಮ ಕೈಗೊಳ್ಳದಂತೆ ಕ್ರಮಕ್ಕಾಗಿ ತಮ್ಮ ಬೆಂಬಲ ಅವಶ್ಯಕ ವಿದೆ ಕಾರಣ ಬಡವರ ಬಂಧು ಮತ್ತ ಅನ್ಯಾಯದ ವಿರುದ್ಧ ಯಾವಾಗಲೂ ಧ್ವನಿ ಎತ್ತುವ ತಮ್ಮಗಳ ಬೆಂಬಲ ನಾವು ಬಯಸುತ್ತೇವೆ ಎಂದು ಸ್ಥಳಿಯ ಮುಖಂಡರಾದ ಎಫ್.ಎ.ಹಣಗಿ,ತಿಪ್ಪೆಸ್ವಾಮಿ,ಡಾ.ಮೌನೇಶ ಪೂಜಾರ, ಹಾಗೂ ತ್ರಿವೇಣಿ ಭಂಡಾರಿ ಯವರು ಒತ್ತಾಯಿಸಿದರು.

ವಿಧಾನ ಪರಿಷತ್ ಸದಸ್ಯರಾದ ಬಸವನಗೌಡ ಬಾದರ್ಲಿ ಮಾತನಾಡಿ, ನಿಮ್ಮ ಕಾರ್ಯಕ್ರಮವು ಬಹಳ ದಿನಗಳಿಂದ ನಡೆಯುತ್ತಿದ್ದು ಇದರ ಸಾಧನೆಗಳ ಬಗ್ಗೆ ಬೆಳಗಾವಿಯಲ್ಲಿ ನಡೆಯುವ ಅಧಿವೇಶನದಲ್ಲಿ ಸರ್ಕಾರದ ಗಮನ ಸೆಳೆಯಲಾಗುವುದು ಮತ್ತು ಸರ್ಕಾರದ ಮುಖ್ಯಸ್ಥ ರಿಗೆ ಪತ್ರ ಮುಖೇನ ಸೂಕ್ತ ಕ್ರಮಕ್ಕಾಗಿ ಒತ್ತಾಯಿಸಿ ಆಗುತ್ತಿರುವ ಅನ್ಯಾಯಕ್ಕೆ ಕಾಲಮಿತಿಯೊಳಗೆ ನ್ಯಾ ಕೊಡಿಸುವ ಕಾರ್ಯ ಮಾಡಲಾಗುವುದು ಯಾವೂದೆ ಕಾರಣಕ್ಕೂ ವಿಚಲಿತರಾಗದೆ ಪ್ರಾಮಾಣಿಕವಾಗಿ ನಿಮ್ಮ ನಿಮ್ಮ ಕಾರ್ಯ ನಿರ್ವಹಣೆಗೆ ಮುಂದಾಗಿ ಇಲ್ಲಿಯವರೆಗೆ ನಿಮಗೆಲ್ಲ ಆದ ಅನ್ಯಾಯ ಸರ್ಕಾರದ ಗಮನಕ್ಕೆ ತರಲಾಗುವುದು ಎಂದರು.

ಶೇಕಡಾ 2% ಮಾತ್ರ ಗುತ್ತಿಗೆ ಸಿಬ್ಬಂದಿಗಳು**(2ನೇಪುಟಕ್ಕೆ)**

## ರಾಷ್ಟ್ರೀಯ ಪಲ್ಸ್ ಪೋಲಿಯೋ ತಾಲೂಕು ಮಟ್ಟದ ಟಾಸ್ಕ್ ಪೋರ್ಸ್ ಸಭೆ

ಯುವಮಾರ್ಗ ಸುದ್ದಿ



**ಮಾನ್ವಿ,ಡಿ.2**– ಪಟ್ಟಣದ ತಹಸೀಲ್ದಾರ್ ಕಚೇರಿ .ಸಭಾಂಗಣದಲ್ಲಿ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ಅಂಗವಾಗಿ ನಡೆದ ತಾಲೂಕು ಮಟ್ಟದ ಟಾಸ್ಕ್ ಪೋರ್ಸ್ ಸಭೆಯಲ್ಲಿ ತಾಲೂಕು ಪಂಚಾಯಿತಿ ಇ.ಓ. ಪುರುರಾಜ್ ಸಿಂಗ್ ಸೋಲಂಕಿ ಐ.ಎ.ಎಸ್. ಮಾತನಾಡಿ ಪೋಲಿಯೋ ಕಾಯಿಲೆ ಒಮ್ಮೆ ಮಗುವಿನಲ್ಲಿ ಕಾಣಿಸಿಕೊಂಡಲ್ಲಿ ಮಗು ಅಂಗವಿಕಲವಾಗುತ್ತದೆ ಅದ್ದರಿಂದ ತಾಲೂಕು ಮಟ್ಟದ ಎಲ್ಲಾ ಇಲಾಖೆಗಳ ಅಧಿಕಾರಿಗಳು ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ಗಂಭಿರವಾಗಿ ಪರಿಗಣಿಸಿ ತಾಲೂಕಿನ ಯಾವೊಂದು ಮಗು ಕೂಡ ಪೋಲಿಯೋ ಲಸಿಕೆಯಿಂದ ಹೊರ ಉಳಿಯದಂತೆ ಆರೋಗ್ಯ ಇಲಾಖೆಯೊಂದಿಗೆ ಸಹಕಾರ ನೀಡುವ ಮೂಲಕ ತಾಲೂಕಿನ 1ರಿಂದ 5ರ ಒಳಗಿನ ಪ್ರತಿಯೊಂದು ಮಗುವಿಗೂ ಕೂಡ ಪೋಲಿಯೋ ಲಸಿಕೆ ಹಾಕಿಸುವುದಕ್ಕೆ ಕ್ರಮ ಕೈಗೊಳ್ಳಬೇಕು ಪೋಲಿಯೋ ಲಸಿಕೆ ಹಾಕಿಸುವುದಕ್ಕೆ ನಿರಾಕರಿಸುವ ಪಾಲಕರ ಮನವೋಲಿಸಿ ಲಸಿಕೆಯನ್ನು ಹಾಕಿಸಬೇಕು. ಹೈರಿಸ್ಕ ಇರುವ ಬೂತ್ ಗಳಲ್ಲಿ ಅಂಗನವಾಡಿ ಕಾರ್ಯಕರ್ತರನ್ನು ನೇಮಕ ಮಾಡಲಾಗುವುದು ಪೋಲಿಯೋ ಲಸಿಕೆ ಹಾಕುವ ಕಾರ್ಯಕ್ರಮಕ್ಕೆ ತೊಂದರೆ ಉಂಟಾದಲ್ಲಿ ಕೂಡಲೆ ತಾಲೂಕು ಆಡಳಿತದ ಗಮನಕ್ಕೆ ತರಬೇಕು.ಲಸಿಕೆಯನ್ನು ಶೀಥಿಲಕರಣ ಪೆಟ್ಟಿಗೆಯಲ್ಲಿ ಇಡಬೇಕಾಗಿರುವುದರಿಂದ ಜೆಸ್ಕಂ ಇಲಾಖೆ ಅಧಿಕಾರಿಗಳು ವಿದ್ಯುತ್ ನಿಲುಗಡೆಯಾಗದಂತೆ ಕ್ರಮ ಕೈಗೊಳ್ಳಬೇಕು, ಬಸ್ ನಿಲ್ದಾಣದಲ್ಲಿ ಮಕ್ಕಳಿಗೆ ಲಸಿಕೆ ಹಾಕುವುದಕ್ಕೆ ಕಲ್ಯಾಣ ಸಾರಿಗೆ ಇಲಾಖೆ ಅಧಿಕಾರಿಗಳು ಅಗತ್ಯ ಸೌಲಭ್ಯ ಕಲ್ಪಿಸಬೇಕು, ಗ್ರಾಮೀಣ ಭಾಗದ ಜನರಲ್ಲಿ ಜಾಗೃತಿ ಮೂಡಿಸುವುದಕ್ಕಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿನ ಶಾಲಾ ಮಕ್ಕಳಿಂದ ಜಾಗೃತಿ ಜಾಥ ನಡೆಸಬೇಕು, ಅಂಗನವಾಡಿ ಕಾರ್ಯಕರ್ತರು ,ಆಶಾಕಾರ್ಯಕರ್ತರು ಲಸಿಕೆ ಹಾಕುವುದಕ್ಕೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ತಾಲೂಕು ಆರೋಗ್ಯಧಿಕಾರಿ ಡಾ.ಶರಣಬಸವರಾಜ ಮಾತನಾಡಿ, ಮಾನ್ವಿ ವಿಧಾನಸಭಾ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ಅಂಗವಾಗಿ ಡಿ.21 ರಂದು ಬೂತ್ ಡೆ ಅಂಗವಾಗಿ ಬೂತ್ ಗಳಲ್ಲಿ 1ರಿಂದ 5ರ ಒಳಗಿನ ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕಲಾಗುವುದು. ಖ.22,23,24 ರಂದು ಪ್ರತಿ ಮನೆ ಮನೆಗೆ ಅಂಗನವಾಡಿ ಕಾರ್ಯಕರ್ತೆಯರು ಭೇಟಿ ನೀಡಿ ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕುವುದಕ್ಕೆ ಕ್ರಮ ಕೈಗೊಳ್ಳಲಿದ್ದಾರೆ .ಮಾನ್ವಿ ಕ್ಷೇತ್ರದ ವ್ಯಾಪ್ತಿಯಲ್ಲಿ 5 ವರ್ಷದೊಳಗಿನ 47ಸಾವಿರ**(2ನೇಪುಟಕ್ಕೆ)**

## "ಪರಿಸರವನ್ನು ನಾವು ಪ್ರೀತಿಸಿದರೆ, ಪರಿಸರವು ನಮ್ಮನ್ನು ಪ್ರೀತಿಸುತ್ತದೆ": ಪರಶುರಾಮ ಮಲ್ಲಾಪುರ

ಯುವಮಾರ್ಗ ಸುದ್ದಿ




**ಸಿಂಧನೂರು,ಡಿ.2**–ಸರ್ಕಾರಿ ಪದವಿ ಪೂರ್ವ ಕಾಲೇಜು ಅಲಬನೂರಿನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರದ ಮೂರನೇ ದಿನದ ಉಪನ್ಯಾಸ ಕಾರ್ಯಕ್ರಮದಲ್ಲಿ ಸಿಂಧನೂರು ನೊಬೆಲ್ ಪದವಿ ಮಹಾವಿದ್ಯಾಲಯದ ಅಧ್ಯಕ್ಷರಾದ ಪರಶುರಾಮ ಮಲ್ಲಾಪುರ ಅವರು "ಪರಿಸರ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ" ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡುತ್ತಾ "ಪ್ರಕೃತಿಯೇ ನಮ್ಮ ಗುರು" ಹಾಗೂ ಪರಿಸರ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿ ಅದು ಮಾನವನ ಆಸೆಗಳನ್ನ ಪೂರೈಸುತ್ತದೆ ವಿನಃ ದುರಾಸೆಗಳನ್ನಲ್ಲ ..ಆದ್ದರಿಂದ "ಪರಿಸರ ವನ್ನು ನಾವು ಪ್ರೀತಿಸಿದರೆ, ಪರಿಸರವು ನಮ್ಮನ್ನು ಪ್ರೀತಿಸುತ್ತದೆ" ಎಂದು ಎನ್ ಎಸ್ ಎಸ್ ಶಿಬಿರಾರ್ಥಿಗಳಿಗೆ ತಿಳಿಸಿದರು. ಈ ದಿನದ ಕಾರ್ಯಕ್ರಮದಲ್ಲಿ ಕಾಲೇಜಿನ ರಾಜ್ಯಶಾಸ್ತ್ರ ಉಪನ್ಯಾಸಕರಾದ ಮೌನೇಶ ಬಳಗನೂರು ಅವರು ಅಧ್ಯಕ್ಷತೆ ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಆಕ್ಸರ್ಡ್ ಸಮೂಹ ಸಂಸ್ಥೆಗಳ ಅಧ್ಯಕ್ಷರಾದ ಶ್ರೀ ಸತ್ಯನಾರಾಯಣ ಶ್ರೇಷ್ಠಿ, ವಿಜಡಮ್ ಕಾಲೇಜಿನ ಆರ್ ಅನಿಲಕುಮಾರ, ಮಾಡಶಿರಿವಾರ ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾ ಯರಾದ ವೆಂಕಟೇಶ ಕುಲಕರ್ಣಿ, ಶಿವಯೋಗಿ ಚನ್ನಬಸವೇಶ್ವರ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕರಾದ ರಾಮರೆಡ್ಡಿ ಹುಡಾ ಹಾಗೂ ಕಾಲೇಜಿನ ಉಪನ್ಯಾಸಕರಾದ ಕೆ.ಮಹಿಬೂಬ್, ಪಂಪಾಪತಿ ಕಲ್ಮಂಗಿ, ಶಂಕರಗೌಡ ಬೂತಲದಿನ್ನಿ ಹಾಗೂ ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಾಧಿ ಕಾರಿಯಾದ ಬಿ.ರವಿಕುಮಾರ ಸಾಸಲಮರಿ ಭಾಗ ವಹಿಸಿದ್ದರು.ಕಾರ್ಯಕ್ರಮವನ್ನು ಶಿಬಿರಾರ್ಥಿ ಜೆ. ಪುಷ್ಪಾ ಬೆಳಗುರ್ಕಿ ನಿರೂಪಿಸಿದರೆ, ಮಮತಾ ಬೆಳಗುರ್ಕಿ ಸ್ವಾಗತಿಸಿದರು ವೆಂಕಟೇಶ ಹರೇಟನೂರು ವಂದಿಸಿದರು.

# ಮೊದಲನೇಯ ಪುಟದಿಂದ

## ಸಾಮಾಜಿಕ ಜಾಲತಾಣ ಬಳಕೆ ಮಿತಿಯಲ್ಲಿರಲಿ : ಡಿವೈಎಸ್‌ಪಿ ವೆಂಕಟೇಶ

ಮಾಲ್‌ಗಳಲ್ಲಿ ನಿಮ್ಮ ದೂರವಾಣಿ ಸಂಖ್ಯೆಯನ್ನು ನೀಡಬಾರದು. ಕಾನೂನಿನಲ್ಲಿ ಡಿಜೀಟಲ್ ಅರೆಸ್ಟ್ ಅವಕಾಶ ವಿಲ್ಲ ಅದ್ದರಿಂದ ಯಾರದರು ಡಿಜೀಟಲ್ ಅರೆಸ್ಟ್ ಹೆಸರಿನಲ್ಲಿ ವಂಚಿಸಿದಲ್ಲಿ ಹಣ ನೀಡದೆ ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು, ಅನ್ ಲೈನ್ ಇನ್ವೆಸ್ಟ್ಮೆಂಟ್ ಆಫ್ ಗಳಲ್ಲಿ ಹಣ ಹೂಡಿಕೆ ಮಾಡಬಾರದು,ಪಾಲಕರು ತಮ್ಮ ಮಕ್ಕಳು ಆನ್ ಲೈನ್ ಗೇಮ್‌ಗಳಿಗೆ ಬಲಿಯಾಗದಂತೆ ನಿಗವಹಿಸಬೇಕು. ಆನವಶ್ಯಕವಾದ ಆಫ್ ಗಳನ್ನು ಡೌನ್ ಲೋಡ್ ಮಾಡಿಕೊಳ್ಳಬಾರದು,18 ವರ್ಷದೊಳಗಿನವರ ಆಶ್ಲೀಲ ಚಿತ್ರಗಳನ್ನು ನೋಡುವುದು ,ಹಂಚಿಕೊಳ್ಳುವುದು ,ಉಳಿಸಿಕೊಳ್ಳುವುದು ಕೂಡ ಅಪರಾಧವಾಗುತ್ತದೆ. ಅದ್ದರಿಂದ ಕೇಂದ್ರ ಸರ್ಕಾರವು ಸೈಬಾರ್ ಕ್ರೈಂಗಳು ನಡೆಯದಂತೆ ತಡೆಯುವ ಉದ್ದೇಶದಿಂದ ಸಂಚಾರ ಸಾಥಿ, ಪೋರ್ಟಲ್ ರೆಮಿಡಿಸ್ ತಂತ್ರಾಂಶವನ್ನು ಮೋಬೈಲ್ ಗಳಲ್ಲಿ ಅಳವಡಿಸುವ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುತ್ತಿದೆ.ನಿಮ್ಮಖಾತೆಯಲ್ಲಿ ಹಣ ಕಳೆದಿರುವದು ತಿಳಿಯುತ್ತಿದ್ದಂತೆ 1030 ಗೆ ಗೋಲ್ಡನ್ ಸಮಯದಲ್ಲಿ ಮಾಹಿತಿ ನೀಡಿದಲ್ಲಿ ನಿಮ್ಮ ಖಾತೆಯಿಂದ ಕದ್ದ ಹಣ ಬೇರೆ ಖಾತೆಗೆ ಹೊಗುವುದನ್ನು ತಡೆಯಬಹುದು ಹಾಗೂ ಬೇಗನೆ ತನಿಖೆ ನಡೆಸುವುದಕ್ಕೆ ಸಾಧ್ಯವಾಗುತ್ತದೆ, ಮುಖ ಪರಿಚಯವಿಲ್ಲದೆ ಇರುವವರ ಬಳಿ ಚಾಟ್ ಮಾಡಬೇಡಿ ಮೋಡಿಗೆ ಒಳಗಾದ ನಂತರ ಹಾಗೂ ಅವರ ಕೋರಿಕೆಯಂತೆ ನಗ್ನರಾದಲ್ಲಿ ನಿಮ್ಮ ನಗ್ನ ವಿಡಿಯೋ ಚಿತ್ರಿಕರಿಸಿಕೊಂಡು ಬ್ಲಾಕ್ ಮೇಲೆ ಮಾಡುತ್ತಾರೆ ಅದ್ದರಿಂದ ಯುವಕ ಯುವತಿಯರು ಸಾಮಾಜಿಕ ಜಾಲತಾಣಗಳಲ್ಲಿ ಅಪರಿಚಿತರೊಂದಿಗೆ ಸ್ನೇಹವನ್ನು ಮಾಡುವಾಗ ಎಚ್ಚರವಯಿಸಬೇಕು .ಸೈಬರ್ ವಂಚನೆಗೆ ಒಳಗಾಗಬೇಡಿ,ಕ್ವಿಕ್ ಮಾಡುವ ಮುನ್ನ ಅಲೋಚನೆ ಮಾಡಿ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕೆ.ಪಿ.ಎಸ್.ವಿ,ಎಸ್,ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ಹಾಗೂ ಆಸ್ಪತ್ರೆಯ ಪ್ರಾಚಾರ್ಯರಾದ ಡಾ.ಜೀನವೇಶ್ವರಯ್ಯ, ಉಪಪ್ರಚಾರ್ಯರಾದ ಡಾ.ಸುಮಂಗಲ. ಹೆಚ್.ಎಂ. ಹಾಗೂ ರಾಯಚೂರು ಜಿಲ್ಲಾ ಸೈಬರ್ ಕ್ರೈಂ ವಿಭಾಗದ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಕಾಲೇಜಿನ ಉಪನ್ಯಾಸಕರು ಹಾಗೂ ವೈದ್ಯವಿದ್ಯಾರ್ಥಿಗಳು ಇದ್ದರು.

## ಸ್ಮಾರ್ಟ್ ಮೀಟರ್ ಅಕ್ರಮ ಆರೋಪ ವಜಾ : ಇಂಧನ ಸಚಿವ ಕೆ.ಜೆ. ಜಾರ್ಜ್ ನಿರಾಳ

ಪೊಲೀಸ್ ವರಿಷ್ಠಾಧಿಕಾರಿ ವರದಿ ನೀಡಿದ ಬಳಿಕ ಮ್ಯಾಜಿಸ್ಟ್ರೇಟ್ ಅವರು ಮೇಲಿನ ಶ್ರೇಣಿಯ ಅಧಿಕಾರಿಗಳಿಂದ ವರದಿ ಕೇಳುತ್ತಾರೆ. ಇಲ್ಲಿ ವಿಚಾರಣಾಧೀನ ನ್ಯಾಯಾಲಯವು ವರದಿ ನೀಡುವಂತೆ ಆದೇಶಿಸಿದೆಯಷ್ಟೆ. ಇದು ಇನ್ನೂ ಪ್ರಾಥಮಿಕ ಹಂತದ ಪ್ರಕ್ರಿಯೆಯಾಗಿದೆ. ಹೀಗಾಗಿ, ತಡೆ ನೀಡಬಾರದು ಎಂದಿದ್ದರು.

ಲೋಕಾಯುಕ್ತ ಪರ ವಕೀಲ ವೆಂಕಟೇಶ್ ಅರಬಟ್ಟಿ ಅವರು ದೇಶದಲ್ಲಿ 97 ಮತ್ತು ಅದಕ್ಕೂ ಹೆಚ್ಚು ಅರ್ಹ ಟೆಂಡರ್‌ದಾರರು ಸಾರ್ಟ್ ಮೀಟರ್ ಅಳವಡಿಕೆ ಕೆಲಸ ಮಾಡುತ್ತಾರೆ. ಇವರೆಲ್ಲರೂ ಬೇರೆಬೇರೆ ರಾಜ್ಯಗಳಲ್ಲಿ ಕೆಲಸ ಮಾಡುತ್ತಾರೆ. ಅವರೂ ಈ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅರ್ಹರಾಗಿದ್ದರು. ಇದರ ಸಂಬಂಧಿತ ಮಾಹಿತಿಯುಬೆಸ್ಕಾಂ ವೆಬ್‌ಸೈಟ್‌ನಲ್ಲಿ ಲಭ್ಯವಿದೆ. ಇದರಲ್ಲಿ ಮುಚ್ಚುಮರೆ ಏನೂ ಇಲ್ಲ. ಐವರು ಟೆಂಡರ್ದಾರರ ಜೊತೆ ಚರ್ಚೆ ನಡೆದಿದೆ. ಪುನರ್ ಬಿಡ್ ಸಹ ಐವರ ನಡುವೆ ನಡೆದಿದೆ. ಎಲ್ಲರೂ ಕರ್ನಾಟಕದವರೇ

ಇದ್ದರು. ಈ ಪೈಕಿ ಟೆಂಡರ್ ಐದು ಷರತ್ತುಗಳನ್ನು ಪೂರೈಸಲು ಮೂವರು ಬಿಡ್‌ದಾರರು ವಿಫಲವಾದ್ದರಿಂದ ಅನರ್ಹರಾಗಿದ್ದರು ಎಂದು ವರದಿಯಲ್ಲಿ ಹೇಳಲಾಗಿದೆ ಎಂದು ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು.

ಪ್ರಕರಣದ ಹಿನ್ನಲೆ

ಸಾರ್ಟ್ ಮೀಟರ್ ವಿಚಾರದಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಇಂಧನ ಇಲಾಖೆ ವಿರುದ್ಧ ಬಿಜೆಪಿ ಸಮರ ಸಾರಿತ್ತು. ಸಾರ್ಟ್ ಮೀಟರ್ ಖರೀದಿಯಲ್ಲಿ ಭಾರೀ ಅವ್ಯವಹಾರ ನಡೆದಿದೆ. ಇತರೆ ಕಂಪನಿಗಳನ್ನು ಕೈಬಿಟ್ಟು ದಾವಣಗೆರೆಯ ರಾಜಶ್ರಿ ಎಲೆಕ್ಟ್ರಿಕಲ್‌ಗೆ ಗುತ್ತಿಗೆ ನೀಡಲಾಗಿದೆ. ಈ ಕಂಪನಿಗಾಗಿ ಇತರೆ ಕಂಪನಿಗಳು ಟೆಂಡರ್‌ನಲ್ಲಿ ಭಾಗವಹಿಸದಂತೆ ನೋಡಿಕೊಳ್ಳಲಾಗಿದೆ ಎಂದು ಬಿಜೆಪಿ ಆರೋಪಿಸಿತ್ತು. ಬೇರೆ ರಾಜ್ಯಗಳಲ್ಲಿ 900 ರೂ.ಗೆ ಸಿಗುವ ಸಾರ್ಟ್ ಮೀಟರ್ ಅನ್ನು 5 ಸಾವಿರದಿಂದ 10 ಸಾವಿರ ರೂ.ಗೆ ಗ್ರಾಹಕರಿಗೆ ನೀಡಲಾಗುತ್ತಿದೆ. ಹೀಗಾಗಿ ಇದೊಂದು ದೊಡ್ಡ ಹಗರಣ ಎಂದು ಆರೋಪಿಸಲಾಗಿತ್ತು.

ಸಾರ್ಟ್ ಮೀಟರ್ ಟೆಂಡರ್ ಸುಮಾರ್ 10 ಸಾವಿರ ಕೋಟಿ ರೂ. ಮೊತ್ತದ್ದಾಗಿರುವ ಕಾರಣ ಜಾಗತಿಕ ಟೆಂಡರ್ ಕರೆಯಬೇಕಿತ್ತು. ಆದರೆ ಕೇವಲ 354 ಕೋಟಿ ರೂ. ವ್ಯವಹಾರ ನಡೆಸುವ ರಾಜಶ್ರಿ ಎಲೆಕ್ಟ್ರಿಕಲ್‌ಗೆ ಟೆಂಡರ್ ನೀಡಲಾಗಿದೆ. 10 ವರ್ಷಕ್ಕೆ 5,296 ಕೋಟಿ ರೂ.ಗೆ ನೀಡಲಾಗಿರುವ ಟೆಂಡರ್ ಅನ್ನು ಬೇಕೆಂದೇ 997 ಕೋಟಿ ರೂ. ಟೆಂಡರ್ ಎಂಬಂತೆ ಬಿಂಬಿಸಲಾಗಿದೆ.

ಬೆಸ್ಕಾಂ ವ್ಯಾಪ್ತಿಗೆ ಮಾತ್ರ ಈ ಟೆಂಡರ್ ಅನ್ವಯವಾದರೂ ಇತರೆ ಎಸ್ಕಾಂಗಳಿಗೂ ಇದೇ ಸಾರ್ಟ್ ಮೀಟರ್ ಖರೀದಿಸಿರುವಂತೆ ಸೂಚಿಸಲಾಗಿದೆ. ಇದು ಸಂಪೂರ್ಣ ಕಾನೂನು ಬಾಹಿರ. ಕೇಂದ್ರದ ಆರ್ಡಿಎಸ್‌ಎಸ್ ಯೋಜನೆಯಡಿ 900 ರೂ.ಗೆ ಸಿಗುವ ಮೀಟರ್ ಅನ್ನು 5 ಸಾವಿರದಿಂದ 8,800 ರೂ.ಗೆ ಗ್ರಾಹಕರು ಖರೀದಿಸಬೇಕಾಗಿದೆ. ಇದಕ್ಕೆಲ್ಲಾ ಬೆಸ್ಕಾಂ ಅಧ್ಯಕ್ಷ ಹಾಗೂ ಇಂಧನ ಸಚಿವ ಕೆ.ಜೆ.ಜಾರ್ಜ್ ಹಾಗೂ ಇತರೆ ಅಧಿಕಾರಿಗಳೇ ಹೊಣೆ ಎಂದು ಬಿಜೆಪಿ ಆರೋಪ ಮಾಡಿತ್ತು.

## ಎಚ್‌ಆರ್ ನೀತಿಗೆ ಗುತ್ತಿಗೆ-ಹೊರಗುತ್ತಿಗೆ ನೌಕರರ ಸಂಘಗಳ ವಿರೋಧ :ಎಂಎಲ್‌ಸಿಗೆ ಮನವಿ

ವರ್ಗಾವಣೆ ಬಯಸ್ಸಿದ್ದರೂ ಪ್ರಧಾನ ಕಾರ್ಯದರ್ಶಿಗಳು ಇದಕ್ಕೆ ಪರ್ಯಾಯ ಮಾರ್ಗ ಎಂಬಂತೆ ಎಲ್ಲಾ ಸಿಬ್ಬಂದಿಗಳನ್ನು ಕರ್ತವ್ಯದಿಂದ ಬಿಡುಗಡೆ ಮಾಡಿ ಪುನಃ ನೇಮಕಾತಿ ಮಾಡಲು ಅವಕಾಶ ಇರುವಂತೆ ಪ್ರಸ್ತಾವನೆ ಸಲ್ಲಿಸಲು ಇಲಾಖೆಯಲ್ಲಿ ಒತ್ತಡ ತಂದಿರುವುದು ವಿಷಾದನೀಯ ಅವರ ಕಛೇರಿಯ ಪತ್ರದಲ್ಲಿ ಈ ವಿಷಯ ಎದ್ದು ಕಂಡಿರುತ್ತದೆ ಮತ್ತು ನೌಕರರು ನಿರ್ವಹಿಸುತ್ತಿರುವ ಅದೆ ಹುದ್ದೆಯಲ್ಲಿ ಮುಂದುವರೆಸುವ ಯಾವೂದೆ ಆದೇಶ/ಆಶ್ವಾಸನೆ ವಿಲ್ಲದೆ ಏಕಾ ಏಕಿ ತೆಗೆದುಹಾಕುವುದು ಸಮಂಜಸವಲ್ಲ ಮಾನ್ಯ ಆರೋಗ್ಯ ಸಚಿವರಿಗೆ ಖುದ್ದು ದೂರವಾಣಿ ಅಥವಾ ಭೇಟಿ ಮಾಡಿ ಪ್ರಸ್ತುತ ಆರೋಗ್ಯ ಇಲಾಖೆಯು ಉತ್ತಮವಾಗಿ ಸೇವೆ ನೀಡುತ್ತಿದ್ದು ದೇಶದಲ್ಲೇ ಆರೋಗ್ಯ ಸೇವೆ ನೀಡುವಲ್ಲಿ ಒಳ್ಳೆಯ ಸ್ಥಾನದಲ್ಲಿದೆ. ಇನ್ನೂ ಉತ್ತಮ ಸ್ಥಾನಕ್ಕೆ ಏರಲು ಎಲ್ಲರೂ ಕೈ ಜೋಡಿಸಲು ನಿಮ್ಮ ಪರವಾಗಿ ಧ್ವನಿಯಾಗಿ ವಿವರಿಸಲಾಗುವುದು ಮತ್ತು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮಾನ್ಯ ಉಪಮುಖ್ಯಮಂತ್ರಿಗಳಲ್ಲಿಯೂ ಸಿಬ್ಬಂದಿಗಳಿಗೆ ಮಾರಕ ಆಗುವಂತಹ ಯಾವುದೇ ವರದಿಗಳನ್ನು ಸರ್ಕಾರ ಒಪ್ಪಬಾರದು ಎಂದು ಕೋರಲಾಗುವುದು ಹಾಗೂ ಸರ್ಕಾರದ ಹೆಸರಿಗೆಮಸಿ ಬಳೆಯುವ ಅಧಿಕಾರಿಗಳಿಗೆ ಸೂಕ್ತ ಸೂಚನೆ ನೀಡುವಂತೆಯೂ ಸಹ ಕೇಳಿಕೊಳ್ಳುತ್ತೇನೆ ಎಜದರು

ಸಿಬ್ಬಂದಿಗಳಿಗೆ ಮಾರಕ ಆಗುವಂತಹ ಹಾಗೂ ಸಿಬ್ಬಂದಿಗಳನ್ನು ಬೀದಿಗೆ ತಳ್ಳುವಂತಹ ಯಾವುದೇ ಅವೈಜ್ಞಾನಿಕ ವಿಧಾನಗಳನ್ನು ಅನುಸರಿಸದೆ ಬಡ ಮತ್ತು ಹಲವು ವರ್ಷಗಳಿಂದ ಸರ್ಕಾರಗಳ ಜೊತೆಗೆ ಹೆಲಿಗೆ ಹೆಗಲು ನೀಡಿ ಆರೋಗ್ಯ ಇಲಾಖೆಯನ್ನು ಸದ್ರಡಗೊಳಿಸಿದ ಇವರಿಗೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪಮುಖ್ಯಂತ್ರಿಗಳು ಹಾಗೂ ಆರೋಗ್ಯ ಸಚಿವರು ನ್ಯಾಯ ವದಗಿಸಲು ಪತ್ರ ಮುಖೇನ ಮತ್ತು ಶೂನ್ಯ ವೇಳೆಯಲ್ಲಿ ಪ್ರಶ್ನೆಗಳನ್ನು ಚರ್ಚೆಗೆ ಎತ್ತಲು ಪ್ರಯತ್ನಿಸಲಾಗುವುದು ಎಂದರು

ಈ ಸಂದರ್ಭದಲ್ಲಿ ನೌಕರರಾದಡಾ.ಮೌನೇಶ.ಪುಜಾರಿ ಆಯುಶ್ ವೈದ್ಯಾಧಿಕಾರಿಗಳು , ತಾಲೂಕಾ ವ್ಯವಸ್ಥಾಪಕಿ ಕು.ತ್ರಿವೇಣಿ, ತಿಪ್ಪೇರುದ್ರಪ್ಪ, ಸುಮಿತ್ರಾ ಹಿರೆಮಠ, ಅಕೌಂಟ್ ಅಸಿಸ್ಟಂಟ್ ದುರಗೇಶ , ಆರೋಗ್ಯ ಸಹಾಯಕಿ ಕು.ದುರ್ಗಾ,

## ರಾಷ್ಟ್ರೀಯ ಪಲ್ಸ್ ಪೋಲಿಯೋ ತಾಲೂಕು ಮಟ್ಟದ ಟಾಸ್ಕ್ ಪೋರ್ಸ್ ಸಭೆ

ಮಕ್ಕಳನ್ನು ಗುರುತಿಸಲಾಗಿದ್ದು ಪೋಲಿಯೋ ಲಸಿಕೆ ಹಾಕುವುದಕ್ಕೆ ಒಟ್ಟು 221 ಬೂತ್ ಗಳ ವ್ಯವಸ್ಥೆ ಮಾಡಲಾಗಿದ್ದು442 ಸಿಬ್ಬಂದಿಗಳು 47 ಮೇಲ್ವಿಚಾರಕರು, 8 ಸಂಚಾರಿ ತಂಡಗಳ ವ್ಯವಸ್ಥೆ ಮಾಡಲಾಗಿದೆ. ಎಂದು ತಿಳಿಸಿದರು.

ಸಭೆಯಲ್ಲಿ ಗ್ರೇಡ್2 ತಹಸೀಲ್ದಾರ್ ಅಬ್ದುಲ್ ವಾಹಿದ್, ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಶೇಖರ.ಡಿ. ಸೇರಿದಂತೆ ಆರೋಗ್ಯ ಶಿಕ್ಷಣಾಧಿಕಾರಿಗಳು, ಆರೋಗ್ಯ ಸಿಬ್ಬಂದಿಗಳು ಹಾಗೂ ವಿವಿಧ ಸರ್ಕಾರಿ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು ಭಾಗವಹಿಸಿದರು.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
9743497111,9743496111

## ವಿಶ್ವ ಏಡ್ಸ್ ದಿನ ಅಂಗವಾಗಿ ಏಡ್ಸ್ ಜಾಗೃತಿ ಜಾಥ




ಯುವಮಾರ್ಗ ಸುದ್ದಿ

**ಮಾನ್ವಿ,ಡಿ.2–** ಪಟ್ಟಣದ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣದಲ್ಲಿ ಆರೋಗ್ಯ ಇಲಾಖೆ ತಾಲೂಕು ಸಾರ್ವಜನಿಕ ಆಸ್ಪತ್ರೆ ಮಾನ್ವಿ, ಲೊಯೋಲ ಆರೋಗ್ಯ ಕೇಂದ್ರ ಜಾಗೀರ ಪನ್ನೂರು, ಲೊಯೋಲ ಸಮಾಜ ಕೇಂದ್ರ ಮಾನ್ವಿ, ಲೊಯೋಲ ಶಿಕ್ಷಣ ಸಮೂಹ ಸಂಸ್ಥೆಗಳು ಮಾನ್ವಿ ಸಂಯುಕ್ತಾಶ್ರಯದಲ್ಲಿ ನಡೆದ ವಿಶ್ವ ಏಡ್ಸ್ ದಿನ– 2025 ಅಂಗವಾಗಿ ನಡೆದ ಏಡ್ಸ್ ಜಾಗೃತಿ ಜಾಥ ಕಾರ್ಯಕ್ರಮದಲ್ಲಿ ಲೊಯೋಲ ಆರೋಗ್ಯ ಕೇಂದ್ರ ಜಾಗೀರ ಪನ್ನೂರಿನ ಸಿಸ್ಟರ್ .ಲೀನಾ ಫಾಯಸ್ ಮಾತನಾಡಿ ಏಡ್ಸ್ ಪೀಡಿತರಿಗೂ ಸಮಾಜದಲ್ಲಿ ಗೌರವದಿಂದ ಬದುಕುವ ಹಕ್ಕಿದೆ .ಏಡ್ಸರೋಗಿಗಳಿಗೆ ಕೂಡ ಸವಾಜದಲ್ಲಿ ಗೌರವದಿಂದ ಬದುಕುವುದಕ್ಕೆ ಅವಕಾಶ ನೀಡಬೇಕು ಏಡ್ಸ್ ಕಾಯಿಲೆಯುಳ್ಳವರು ಕೂಡ ನಿಯಮಿತವಾಗಿ ವೈದ್ಯರಲ್ಲಿ ತಮ್ಮ ಆರೋಗ್ಯವನ್ನು ತಪಾಸಣೆ ಮಾಡಿಸಿಕೊಂಡು ಸೂಕ್ತವಾದ ಚಿಕಿತ್ಸೆಯನ್ನು ಪಡೆದುಕೊಂಡಲ್ಲಿ ಬಹಳ ವರ್ಷಗಳ ಕಾಲ ಬದುಕಲು ಅವಕಾಶವಿದೆ. ಹೆಚ್.ಐ.ವಿ ಪೀಡಿತ ರೋಗಿಗಳಿಗೆ ಕೂಡ ಸರ್ಕಾರ ಅನೇಕ ಯೋಜನೆಗಳನ್ನು ರೂಪಿಸಿದೆ ಅವುಗಳ ಸದುಪಯೋಗ ಪಡಿಸಿಕೊಳ್ಳಬೇಕು ಪ್ರತಿಯೊಬ್ಬರು ಕೂಡ ಏಡ್ಸ್ ಅಥವಾ ಹೆಚ್.ಐ.ವಿ ಕಾಯಿಲೆ ಬರದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸುವುದು ಅಗತ್ಯವಾಗಿದೆ. ಎಂದು ತಿಳಿಸಿದರು.

ಲೊಯೋಲ ಶಿಕ್ಷಣ ಸಂಸ್ಥೆಯ ಮಕ್ಕಳು ನೃತ್ಯದ ಮೂಲಕ ಸಾರ್ವಜನಿಕರಲ್ಲಿ ಏಡ್ಸ್ ಕಾಯಿಲೆ ಕುರಿತು ಜಾಗೃತಿ ಮೂಡಿಸಿದರು.

ಐಸಿಟಿಸಿ ಕೌನ್ಸಿಲರ್ ರಾಜೇಶ್ವರಿ ಮಾತನಾಡಿದರು. ತಾಲೂಕ ಆರೋಗ್ಯ ಶಿಕ್ಷಣಾಧಿಕಾರಿ ಚಿನ್ನಿ ಬಾಬು, ಲೊಯೋಲ ಸಮಾಜ ಸೇವಾ ಕೇಂದ್ರದ ಸಹಾಯಕ ನಿರ್ದೇಶಕರಾದ ಫಾ.ಜಾರ್ಜ್ ಪಿಂಟೋ, ಐಸಿಟಿಸಿ ಲ್ಯಾಬ್ ಟೆಕ್ನಿಷಿಯನ್ ಗಿರೀಶ್ ಹಾಗೂ ಆಶಾ ಕಾರ್ಯಕರ್ತೆಯರು ಭಾಗವಹಿಸಿದ್ದರು.

## ಅಮ್ಮ ಸಂಸ್ಥೆಯಿಂದ ವಿಕಲಚೇತನರಿಗೆ ಆಹಾರ ಕಿಟ್ ವಿತರಣೆ



**ಹಗರಿಬೊಮ್ಮನಹಳ್ಳಿ,ಡಿ.2–** ಅಮ್ಮ ಗ್ರಾಮೀಣ ಮತ್ತು ನಗರಾಭಿವೃದ್ಧಿ ಸಂಸ್ಥೆಯ 5ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಕೆಲವು ವಿಕಲಚೇತನರಿಗೆ ಆಹಾರ ಕಿಟ್‌ಗಳನ್ನು ವಿತರಿಸುತ್ತಿದ್ದೇವೆ ಎಂದು ಅಮ್ಮ ಸಂಸ್ಥೆಯ ಸಂಸ್ಥಾಪಕ ಡಾ.ಸಾಹಿರಾಬಾನು ಹೇಳಿದರು.

ಪಟ್ಟಣದ ಸೋನಿಯಾನಗರದಲ್ಲಿ ಸಂಸ್ಥೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿ ವಿಕಲಚೇತನರು ದೇವರಮಕ್ಕಳಾಗಿದ್ದಾರೆ ಇತ್ತೀಚಿನ ದಿನಗಳಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಅವರು ತಮ್ಮದೇಆದ ಛಾಪು ಮೂಡಿಸುತ್ತಿದ್ದಾರೆ. ಇಲ್ಲಿ ನಮ್ಮ ಭಾಗದಲ್ಲೂ ವಿಕಲಚೇತನರಿಗೆ ತಲುಪಬೇಕಾದ ಸರ್ಕಾರಿ ಸೌಲಭ್ಯಗಳು ಅವರ ಮನೆ ಬಾಗಿಲಿಗೆ ತಲುಪವ ವ್ಯವಸ್ಥೆಯನ್ನು ಅಮ್ಮ ಸಂಸ್ಥೆಯು ಆರಂಭದಿಂದಲೂ 5ವರ್ಷಗಳ ಕಾಲ ಮಾಡುತ್ತಲೇ ಬಂದಿದೆ. ಎಲ್ಲಾ ಅಂಗಾಂಗಗಳು ಸರಿಇರುವ ನಮಗಿಂತಲೂ ವಿಕಲಚೇತನರು ಬುದ್ದಿವಂತರು ಮತ್ತು ಶ್ರಮಜೀವಿಗಳಾಗಿ ಕೆಲಸ ಮಾಡುತ್ತಾರೆ. ಹಾಗಾಗಿ ಈ ದಿನ ಕೆಲವು ವಿಕಲ ಚೇತನರಿಗೆ ಸಂಸ್ಥೆಯಿಂದ ಆಹಾರ ಕಿಟ್‌ಗಳನ್ನು ವಿತರಿಸುವ ಮೂಲಕ ಅವರ ಬೆಂಬಲಕ್ಕೆ ಸದಾ ನಾವು ನಿಂತಿರುತ್ತೇವೆ.

ಇದೇ ವೇಳೆ ಇತ್ತೀಚಿಗೆ ನಿಧನರಾದ ಸಾಲುಮರದ ತಿಮ್ಮಕ್ಕನವರಿಗಾಗಿ ಒಂದು ನಿಮಿಷ ಮೌನಾಚರಣೆಯನ್ನು ನಡೆಸಲಾಯಿತು. ಆ ನಂತರ ಸಾಹಿರಾಬಾನು ಮಾತನಾಡಿ ಯಾವುದೇ ವಿಶ್ವವಿದ್ಯಾಲಯಗಳಲ್ಲಿ ಓದದಿದ್ದರೂ ಸಹ ತಿಮ್ಮಕ್ಕನವರು ವಿಶ್ವವಿಖ್ಯಾತಿಗಳಿಸಿದ್ದಾರೆ. 1911 ಜೂನ್ 30ರಂದು ಜನಿಸಿದ ಅವರು 14 ನವೆಂಬರ್ 2025ರಂದು ನಿಧನರಾದರು 114 ವರ್ಷಗಳ ಶತಾಯಿಷಿ ತಿಮ್ಮಕ್ಕನವರು ಹಾಕಿಕೊಟ್ಟು ಹೋದ ಮಾರ್ಗದಲ್ಲಿ ನಾವೆಲ್ಲಾ ನಡೆಯಬೇಕಿದೆ. ಕುದೂರು ಮತ್ತು ಹುಲಿಕ ನಡುವಿನ ರಸ್ತೆ ಬದಿಯಲ್ಲಿ 385 ಹಾಲದಮರಗಳನ್ನು ನೆಟ್ಟು ಪೋಷಿಸಿದರು ಅವರ ಮಹಾನ್ ಕಾರ್ಯವನ್ನು ಗುರುತಿಸಿ ಪದ್ಮಶ್ರೀ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳು ಅವರನ್ನು ಹುಡುಕಿಕೊಂಡು ಬಂದವು. ಇಲ್ಲಿಯವರೆಗೂ ಅಂದಾಜು 8000ಕ್ಕೂ ಹೆಚ್ಚು ಮರಗಳನ್ನು ಅವರು ನೆಟ್ಟಿದ್ದಾರೆ. ಭಾರತದ ರಾಷ್ಟ್ರೀಯ ನಾಗರಿಕ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿ, ರಾಜ್ಯೋತ್ಸವ, ನಾಡೋಜ ಪ್ರಶಸ್ತಿ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪಡೆದಿದ್ದರು. ಅಮೆರಿಕಾದ ಲಾಸ್ ಏಂಜಲಿಸ್ ಮತ್ತು ಓಕ್ಲಾಂನಲ್ಲಿ ಅವರ ಹೆಸರಿನಲ್ಲಿ ತಿಮ್ಮಕ್ಕಸ್ ಸಂಪನ್ಮೂಲಗಳು ಎಂಬ ಪರಿಸರವಾದಿ ಸಂಘಟನೆಯನ್ನು ಸ್ಥಾಪಿಸಲಾಗಿದೆ. ಇವರು ನಮ್ಮ ಎಲ್ಲಾ ಮಹಿಳೆಯರಿಗೆ ಸ್ಫೂರ್ತಿಯಾಗಿದ್ದಾರೆ. ಮುಂದಿನ ಪೀಳಿಗೆಗೆ ನಾವು ಪರಿಸರವನ್ನು ಉಳಿಸಬೇಕಿದೆ ಹಾಗಾಗಿ ಅಮ್ಮ ಸಂಸ್ಥೆಯಿಂದ ಪ್ರತೀ ವರ್ಷವೂ ನೂರಾರು ಸಸಿ ನೆಡುವ ಕಾರ್ಯಕ್ರಮವನ್ನು ಆಯೋಜಿಸುತ್ತಿದ್ದವೆ ಎಂದರು.

ಈ ಸಂದರ್ಭದಲ್ಲಿ ವಿಕಲಚೇತನರಾದ ಸಿದ್ದಮ್ಮ, ಭಾಗ್ಯಮ್ಮ, ಜಿ.ಎಂ.ಉಮಾಪತಿ, ಕೊಟ್ರೇಶ್, ಬಸವರಾಜಪ್ಪ, ಕಮಲ್‌ಬೀ, ತಿಪ್ಪಮ್ಮ, ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಶಿಯಾಬೇಗಂ, ನಿರ್ದೇಶಕರು ಹಾಗೂ ಪುರಸಭೆ ಸದಸ್ಯೆ ರೇಷ್ಮಾ, ಸಹ ನಿರ್ದೇಶಕಿ ನಜ್ಮಾ, ಟಿ.ರೇಣುಕಾ, ಮುಖಂಡ ವೆಂಕಟೇಶ್ ಮತ್ತು ಪುರಸಭೆಯ ಆರ್.ಡಬ್ಲ್ಯೂ ಚಾಂದ್ ಉಪಸ್ಥಿತರಿದ್ದರು.

## ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಯಶಸ್ವಿಗೆ ಕಂಕಣ ಬದ್ಧರಾಗೋಣ:ಗಾದೆಪ್ಪ

**ಬಳ್ಳಾರಿ, ಡಿ.2–**ಅಖಂಡ ಬಳ್ಳಾರಿ ಜಿಲ್ಲೆಯಲ್ಲಿ 1958 ರಲ್ಲಿ ನಡೆದ ಸಮ್ಮೇಳನ 68 ವರ್ಷಗಳ ನಂತರ ಬಳ್ಳಾರಿಗೆ ಬಂದಿದ್ದು ಅದನ್ನು ಯಶಸ್ವಿಗೊಳಿಸಲು ನಾವೆಲ್ಲರೂ ಕಂಕಣ ಬದ್ಧರಾಗೋಣ ಎಂದು ಮೇಯರ್ ಪಿ.ಗಾದೆಪ್ಪ ಕರೆ ನೀಡಿದ್ದಾರೆ.




ಅವರು ನಗರದ ಕನ್ನಡ ಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದಿಂದ ಆಯೋಜಿಸಿದ್ದ ಕರ್ನಾಟಕ ರಾಜ್ಯೋತ್ಸವ ಹಾಗೂ ವಿವಿಧ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿ ವಿವಿಧ ಹುದ್ದೆಗಳನ್ನಲಂಕರಿಸಿದ ಮತ್ತು ಪ್ರಶಸ್ತಿ ಪುರಸ್ಕೃತರ ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಬಳ್ಳಾರಿಗೆ ಬಂದಿರುವ ಸಂದರ್ಭದಲ್ಲಿಯೇ ನಾನು ಬಳ್ಳಾರಿ ಮಹಾನಗರ ಪಾಲಿಕೆಯ ಮಹಾಪೌರನಾಗಿ ಆಯ್ಕೆಯಾಗಿರುವುದು ನನ್ನ ಸುದೈವವೆಂದು ಭಾವಿಸುತ್ತೇನೆ. ಜಿಲ್ಲೆಯ ಜನಪ್ರತಿನಿಧಿಗಳು, ಎಲ್ಲಾ ಸಂಘ-ಸಂಸ್ಥೆಗಳು ಹಾಗೂ ಶಿಕ್ಷಣ ಸಂಸ್ಥೆಗಳು ಎಲ್ಲರೂ ಒಗ್ಗೂಡಿ ಕನ್ನಡ ಸಾಹಿತ್ಯ ಸರಸ್ವತಿಯ ತೇರನ್ನು ಎಳೆಯೋಣ ಎಂದರು.

ಕ.ಸಾ.ಪ ಜಿಲ್ಲಾ ಅಧ್ಯಕ್ಷ ಡಾ. ನಿಷ್ಠಿ ರುದ್ರಪ್ಪ ಅಧ್ಯಕ್ಷತೆ ವಹಿಸಿ, ಗಡಿ ಜಿಲ್ಲೆಯಲ್ಲಿ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಪಸರಿಸುವ ನಿಟ್ಟಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕಾರ್ಯನಿರ್ವಹಿಸುತ್ತಿದೆ. ಅಖಂಡ ಬಳ್ಳಾರಿ ಜಿಲ್ಲೆಯ ಜನತೆ ಬಹುದಿನದಿಂದ ನಿರೀಕ್ಷಿಸುತ್ತಿರುವ ಅಖಿಲ ಭಾರತ 88ನೇ ಕನ್ನಡ ಸಾಹಿತ್ಯ ಸಮ್ಮೇಳನ ಆಡಳಿತಾತ್ಮಕ ಮತ್ತು ತಾಂತ್ರಿಕ ಕಾರಣಗಳಿಂದ ವಿಳಂಬವಾದರೂ ಬಳ್ಳಾರಿ ಜಿಲ್ಲೆಯಲ್ಲಿಯೇ ನಡೆಯಲಿದೆ ಈ ಕುರಿತು ಯಾವುದೇ ಅನುಮಾನ ಬೇಡ. ಸರ್ಕಾರ ಈಗಾಗಲೇ 2025-26 ನೇ ಸಾಲಿನ ಆಯವ್ಯಯದಲ್ಲಿ 10 ಕೋಟಿ ರೂಪಾಯಿಗಳ ಅನುದಾನವನ್ನು ಬಳ್ಳಾರಿಯಲ್ಲಿ ಜರುಗುವ ಸಾಹಿತ್ಯ ಸಮ್ಮೇಳನಕ್ಕೆ ಮೀಸಲಿರಿಸಿದೆ ಎಂದು ಹೇಳಿದರು.

ಬಳ್ಳಾರಿ ಜಿಲ್ಲಾ ಕೈಗಾರಿಕಾ ಮತ್ತು ವಾಣಿಜ್ಯ ಸಂಸ್ಥೆಯ ನೂತನ ಅಧ್ಯಕ್ಷ ಅವ್ವಾರು ಮಂಜುನಾಥ, ಕರ್ನಾಟಕ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ವೆಂಕಟೇಶ್ ಹೆಗಡೆ, ಉತ್ತಮ ಸಹಕಾರ ಸಂಘ ಪ್ರಶಸ್ತಿ ಪುರಸ್ಕೃತ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಬಿ. ಪೊಂಪನಗೌಡ ಸೇರಿದಂತೆ ಇತರರನ್ನು ಸನ್ಮಾನಿಸಿ ಗೌರವಿಸಲಾಯ್ತು.

# ಖಾಲಿ ಕುರ್ಚಿ ಎಂಬ ತತ್ವವೂ...ನಮ್ಮ ಬದುಕೂ

ಜಾಕ್ ಮಾ ಎಂಬ ವ್ಯಕ್ತಿ ತನಗೆ ಅತ್ಯಂತ ಮುಜುಗರ ತಂದ ಒಂದು ಕ್ಷಣವನ್ನು ತನ್ನ ಚಾಣಾಕ್ಷತೆಯಿಂದ ಆಲಿಬಾಬ ಎಂಬ ಅತಿ ದೊಡ್ಡ ಸಂಸ್ಥೆಯನ್ನು ಕಟ್ಟಲು ಬಳಸಿದ ಎಂಬ ಘಟನೆಯನ್ನು ನೋಡೋಣ.

ಆಲಿಬಾಬ ಎಂಬ ಬಹುದೊಡ್ಡ ಆನ್ಲೈನ್ ಮಾರಾಟ ಸಂಸ್ಥೆಯ ಬಹುಕೋಟಿ ಮೌಲ್ಯದ ಅತಿ ದೊಡ್ಡ ಕಂಪನಿಯನ್ನು ಸ್ಥಾಪಿಸಿದ ಜಾಗತಿಕ ವ್ಯಕ್ತಿಯಾಗಿ ಗುರುತಿಸಲ್ಪಡುವ ಮುನ್ನ ನಡೆದ ಈ ಘಟನೆ ಆತನ ಬದುಕನ್ನೇ ಬದಲಾಯಿಸಿತು ಎಂದರೆ ಅಚ್ಚರಿ ಪಡಬೇಡಿ.

ಹ್ಯಾಂಗ್ ಜಾವೋ ಎಂಬ ಇಂಗ್ಲಿಷ್ ಶಾಲೆಯಲ್ಲಿ ಓದುತ್ತಿದ್ದ ಜಾಕ್ ಸೆಮಿನಾರ್ ಒಂದರಲ್ಲಿ ಭಾಗವಹಿಸಿದ್ದ. ಸ್ಥಳೀಯವಾಗಿ ಸುಮಾರು 20ಕ್ಕೂ ಹೆಚ್ಚು ವ್ಯಾಪಾರಿಗಳು ಭಾಗವಹಿಸಲಿದ್ದ ಆ ಸೆಮಿನಾರಿನಲ್ಲಿ ತನ್ನ ಸಂಶೋಧನಾತ್ಮಕ ವರದಿಯನ್ನು

ಮಂಡಿಸಲು ಆತ ಅತ್ಯಂತ ಉತ್ತಮ ತಯಾರಿ ಮಾಡಿಕೊಂಡಿದ್ದ. ತನ್ನ ಪ್ರಬಂಧದ ಪ್ರತಿಯೊಂದು ಸಾಲನ್ನು ಆತ ಪದೇ ಪದೇ ಓದಿ ಬಾಯಿ ಪಾಠ ಮಾಡಿಕೊಂಡಿದ್ದ.

ಸೆಮಿನಾರಿನ ಆರಂಭಕ್ಕೂ ಮುನ್ನ ತಾನೇ ಓಡಾಡಿ ಆ ಇಪ್ಪತ್ತು ಜನರಿಗಾಗಿ ಕುರ್ಚಿಗಳನ್ನು ಆತ ಹೊಂದಿಸಿದ. ಸೆಮಿನಾರ್ ನ ಸಮಯಕ್ಕೆ ಸರಿಯಾಗಿ ವೀಕ್ಷಕರಲ್ಲಿ ಕೇವಲ ಓರ್ವ ವ್ಯಕ್ತಿ ಮಾತ್ರ ಅಲ್ಲಿ ಬಂದು ಕುಳಿತುಕೊಂಡ. ಮುಂದಿನ ಕೆಲ ಕ್ಷಣಗಳು ಕಾತರದಿಂದ ಕಾದರೂ ಯಾರೊಬ್ಬರೂ ಆ ಸ್ಥಳಕ್ಕೆ ಬರಲೇ ಇಲ್ಲ. ಸುಮಾರು 20 ಜನ ಭಾಗವಹಿಸಬೇಕಾದ ಕಾರ್ಯಕ್ರಮದಲ್ಲಿ ಕೇವಲ ಐದು ಜನ ಕೂಡ ಬರದೆ ಹೋದದ್ದು ಆತನಿಗೆ ನಿರಾಶೆಯನ್ನುಂಟು ಮಾಡಿದರೂ ಉಳಿದ 19 ಖಾಲಿ ಕುರ್ಚಿಗಳ ನಡುವೆ ಮುಂದಿನ ಸಾಲಿನಲ್ಲಿ ಕುಳಿತ ಓರ್ವ ವ್ಯಕ್ತಿ ಅತ್ಯಂತ ಕುತೂಹಲದಿಂದ ಈತ ಮಂಡಿಸಲಿರುವ ಪ್ರಬಂಧವನ್ನು ಕೇಳಲು ಕುಳಿತುಕೊಂಡಿದ್ದ.

ಜಾಕ್‌ನ ಎದೆಯ ತಾಳ ತಪ್ಪಿದಂತೆ ಭಾಸವಾಯಿತು. ಕಾರ್ಯಕ್ರಮವನ್ನು ರದ್ದುಪಡಿಸಲೇ ಎಂದು ಆತ ಕೆಲ ಕ್ಷಣ ಯೋಚಿಸಿದ. ಕುಳಿತಿದ್ದ ಓರ್ವ ವ್ಯಕ್ತಿಗೆ ಕ್ಷಮೆ ಯಾಚಿಸಿ ಹೊರಟು ಬಿಡಲೇ ಎಂದು ಮನದ ಮತ್ತೊಂದು ಮೂಲೆಯಿಂದ ಕರೆ ಕೇಳಿಸಿತು.ಅಂತಿಮವಾಗಿ ಇನ್ನೇನು ಬಿಟ್ಟುಬಿಡಬೇಕು ಎಂದು ಯೋಚಿಸಿ ಮೇಲೆದ್ದನಾತ.... ಆದರೆ ಮುಂದಿನ ಕೆಲವೇ ಕ್ಷಣಗಳಲ್ಲಿ ಅತ್ಯಂತ ಸಹಜವಾಗಿ ನಡೆದುಕೊಂಡು ಹೋಗಿ ವೇದಿಕೆಯ ಮೇಲೆ ನಿಂತುಕೊಂಡ. ತನ್ನ ಮುಂದಿರುವ ಮೈಕನ್ನು ಸರಿಪಡಿಸಿಕೊಂಡು ತನ್ನ ಮುಂದೆ ಕುಳಿತಿದ್ದ ಆ ಏಕೈಕ ವ್ಯಕ್ತಿಗೆ ತಲೆಬಾಗಿ ನಂತರ ಆತನನ್ನು ಉದ್ದೇಶಿಸಿ ನಿಮಗೆ ಆಸಕ್ತಿ ಇದ್ದರೆ, ಇದನ್ನು ತುಂಬಿದ ಸಭೆ ಎಂದೇ ಭಾವಿಸಿ. ನಾನು ನನ್ನ ವಿಷಯವನ್ನು ಮಂಡಿಸುವೆ ಎಂದು ಸ್ಪಷ್ಟವಾಗಿ ಆದರೆ ಅಷ್ಟೇ ಮೆಲುವಾದ ದನಿಯಲ್ಲಿ ಹೇಳಿದ.



ಮುಂದಿನ ಎರಡು ಗಂಟೆಗಳ ಕಾಲ ಆತ ನಿರಂತರವಾಗಿ ವಿಷಯವನ್ನು ಮಂಡಿಸಿ ತಾನು ಹೇಳಬೇಕೆಂದು ಕೊಂಡತನ್ನೆಲ್ಲ ಯೋಜನೆಗಳಲ್ಲಿ ಪ್ರತಿಯೊಂದನ್ನು ಉದಾಹರಣೆ ಸಮೇತವಾಗಿ ಆತ ತನ್ನ ಮುಂದೆ ಕುಳಿತಿದ್ದ ವ್ಯಕ್ತಿಗೆ ಕಣ್ಣಿಗೆ ಕಟ್ಟುವಂತೆ ವಿವರಿಸಿದ. ತನ್ನೆಲ್ಲ ಯೋಜ ನೆಗಳನ್ನು ಹಂಚಿಕೊಂಡ ಆತ ಅಂತಿಮವಾಗಿ ಒಂದೊಳ್ಳೆಯ ಉಪನ್ಯಾಸವನ್ನು ನೀಡಿದ ತೃಪ್ತಿಯಿಂದ ವೇದಿಕೆಯಿಂದ ಕೆಳಗಿಳಿ ದಕೆಲ ವರ್ಷಗಳ ನಂತರ ಜಾಕ್ ಮಾ ತನ್ನದೇ ಆದ ಅಲಿಬಾಬಾ ಕಂಪನಿಯನ್ನು ಪ್ರಾರಂಭಿಸಿ ಸಾವಿರಾರು ಜನರಿಗೆ ಉದ್ಯೋಗ ನೀಡಿದ ನಂತರ ಒಂದು ದಿನ ತನ್ನ ಎಲ್ಲ ಉದ್ಯೋಗಿಗಳನ್ನು ಹೊಂದಿದ ಸಮೂಹದ ಸಭೆಯಲ್ಲಿ ಈ ದಿನವನ್ನು ನೆನಪಿಸಿ ಕೊಂಡ.

ನೀವು ಕೇವಲ ಓರ್ವ ವ್ಯಕ್ತಿ ಎಂದು ಪರಿಗಣಿಸದೆ ನಿಮ್ಮ ಎಲ್ಲಾ ಸೇವೆಯನ್ನು ಆತನಿಗೆ ನೀಡಲು ಸಾಧ್ಯವಾದರೆ ನೀವು ಲಕ್ಷಾಂತರ ಜನರಿಗೆ ಕೂಡ ಅದೇ ಮಟ್ಟದ ಸೇವೆಯನ್ನು ನೀಡುವಿರಿ. ಆ ಒಂದು ಕ್ಷಣದ ಅವಮಾನ ಆತನ ಬಹುದೊಡ್ಡ ಯೋಜನೆಗೆ ಮೂಲ ಬೀಜವಾಗಿ ಕಾರ್ಯನಿರ್ವಹಿಸಿತು.

ಅದೆಷ್ಟೇ ಬೇಡಿಕೆ ಕಡಿಮೆ ಇದ್ದರೂ ಪರವಾಗಿಲ್ಲ ಪ್ರತಿಯೊಬ್ಬ ಗ್ರಾಹಕನು ಅತ್ಯಮೂಲ್ಯವಾದ ಸೇವೆಯನ್ನು ಬಯಸಿದಾಗ ನಾವು ಕೊಡಲು ಸಿದ್ಧರಿರಬೇಕು. ಸಣ್ಣ ಮಟ್ಟದ ವೀಕ್ಷಕರು ಮತ್ತು ಗ್ರಾಹಕರು ನಮಗೆ ಹೆಚ್ಚು ಅವಶ್ಯಕ.ಚಂದ್ರನ ಮೇಲೆ ಕಾಲಿಡಲು ಕೂಡ ಮೊದಲು ಒಂದು ಪುಟ್ಟ ಹೆಜ್ಜೆಯನ್ನು ಇಡಬೇಕಲ್ಲವೇ?

ಅತಿ ದೊಡ್ಡ ಸಾಗರವನ್ನು ಸೇರಲು ಓಡುವ ಪುಟ್ಟ ನದಿಯು ಕೂಡ ತನ್ನ ಮೂಲದಲ್ಲಿ ಒಂದು ಸಣ್ಣ ನೀರಿನ ಹರಿವಾಗಿರುತ್ತದೆ ಅಲ್ಲವೇ?

ಪ್ರತಿ ಸಣ್ಣ ಹೆಜ್ಜೆ, ಪ್ರತಿ ಸಣ್ಣ ಕೋಣೆ, ಭೇಟಿಯಾಗುವ ಪ್ರತಿಯೊಬ್ಬ ವ್ಯಕ್ತಿ ನಮ್ಮ ಬದುಕಿನಲ್ಲಿ ಅತ್ಯವಶ್ಯಕ ಬದಲಾವಣೆಯನ್ನು ತರಲು ಸಾಧ್ಯ

ಜಾಕ್ ಹೇಳುವ ಪ್ರಕಾರ ಖಾಲಿ ಕುರ್ಚಿಗಳು ಆತನಿಗೆ ಭಯವನ್ನು ಹುಟ್ಟಿಸಲಿಲ್ಲ, ಬದಲಾಗಿ ಆತನ ಆತ್ಮವಿಶ್ವಾಸವನ್ನು ಹೆಚ್ಚಿಸಿದವು. ಬಹುತೇಕ ಬಹಳಷ್ಟು ಉದ್ದಿಮೆದಾರರು ಮರೆಯುವ ಒಂದು ವಿಷಯವನ್ನು ಜಾಕ್ ಅತ್ಯಂತ ಸ್ಪಷ್ಟವಾಗಿ ತಿಳಿದುಕೊಂಡಿದ್ದ. ತುಂಬಿದ ಸಭಾಂಗಣದಿಂದ ಯಶಸ್ಸನ್ನು ಗುರುತಿಸಬಾರದು... ಸಂಪೂರ್ಣ ಖಾಲಿಯಾಗಿರುವ ಕೋಣೆ ಕೂಡ ನಿನ್ನ ಯಶಸ್ಸಿಗೆ ದಾರಿ ದೀಪವಾಗಬಲ್ಲದು.

ನಿಜ ಅಲ್ಲವೇ ಸ್ನೇಹಿತರೆ?

ಅತ್ಯಂತ ದೊಡ್ಡ ಕೋಣೆಯಲ್ಲಿ ಹಚ್ಚಿಟ್ಟ ಒಂದು ಕಿರು ಹಣತೆ ಕೂಡ ಕತ್ತಲನ್ನು ಓಡಿಸಲು ಸಾಧ್ಯ.

ನಮ್ಮ ಭವಿಷ್ಯದ ಬದುಕನ್ನು ನಮ್ಮ ಇಂದಿನ ಚಿಕ್ಕಪುಟ್ಟ ನಡೆಗಳ ಮೂಲಕ ನಾವು ಗುರುತಿಸಿಕೊಳ್ಳಬಹುದು.ನೀವು ಕೇವಲ ಮೂರು ನಾಲ್ಕು ಜನ ನೋಡುತ್ತಿರುವ ನೇರ ಪ್ರಸಾರವೇ ಇರಬಹುದು, ಕೆಲವೇ ಕೆಲವು ಜನರು ಲೈಕ್ ಮಾಡುವ ಸುದ್ದಿಯೇ ಇರಬಹುದು.ಇಬ್ಬರು ಮೂವರು ವಿದ್ಯಾರ್ಥಿಗಳಿಂದ ಕೂಡಿದ ತರಗತಿಯೇ ಇರಲಿ ಕೇವಲ ಒಂದು ವಿಷಯದ ಕುರಿತು ಮಾತನಾಡುವುದೇ ಇರಲಿ, ಕೊನೆಯ ಪಕ್ಷ ಯಾರು ಕೂಡ ನಮ್ಮನ್ನು ಪ್ರಶ್ನಿಸಲು ಸಾಧ್ಯವಾಗದ,ಬೇರೆಯವರು ನಮ್ಮನ್ನು ನೋಡುತ್ತಿದ್ದಾರೆಯೋ ಇಲ್ಲವೋ ಎಂಬುದನ್ನು ಕೂಡ ಅರಿಯಲು ಆಗದ ಏಕಮುಖ ಪ್ರಸಾರ ವ್ಯವಸ್ಥೆಯೇ ಇರಲಿ.... ಪ್ರತಿಯೊಬ್ಬ ವ್ಯಕ್ತಿಯು ಕೂಡ ನಮಗೆ ತನ್ನ ಬಹುಮೂಲ್ಯ ಸಮಯವನ್ನು ನೀಡಿರುತ್ತಾನೆ . ಅವರ ಸಮಯಕ್ಕೆ ನಾವು ಬೆಲೆ ಕೊಡಲೇಬೇಕು. ಚಾಂಪಿಯನ್ ಎಂದೆನಿಸಿಕೊಳ್ಳುವ ವ್ಯಕ್ತಿ ಯಾರು ನೋಡಲಿ ಬಿಡಲಿ ಪ್ರತಿದಿನ ತನ್ನ ತರಬೇತಿಯನ್ನು ಪೂರೈಸುತ್ತಾನೆ.

ನಮ್ಮ ರಾಷ್ಟ್ರಕವಿ ಜಿಎಸ್ ಶಿವರುದ್ರಪ್ಪನವರು ಹೇಳಿರುವ ಗೀತೆಯ ಸಾಲುಗಳು ನೆನಪಾಗುತ್ತಿವೆ

ಎದೆ ತುಂಬಿ ಹಾಡಿದೆನು ಅಂದು ನಾನು ಮನವಿಟ್ಟು ಕೇಳಿದಿರಿ ಅಲ್ಲಿ ನೀವು ಎಂಬ ಕವಿತೆಯಲ್ಲಿ ಎಲ್ಲ ಕೇಳಲಿ ಎಂದು ನಾನು ಹಾಡುವುದಿಲ್ಲ ಹಾಡುವುದು ಅನಿವಾರ್ಯ ಕರ್ಮ ನನಗೆ ಎಂಬ ಕವನದ ಸಾಲುಗಳು ಮುಂದುವರೆದು ಹಾಡುವೆನು ಮೈದುಂಬಿ ಎಂದಿನಂತೆ ಕುಳಿತು ಯಾರು ಕಿವಿ ಮುಚ್ಚಿದರೂ ಎನಗಿಲ್ಲ ಚಿಂತೆ ಎಂಬ ಸಾಲಿನಲ್ಲಿ ಮುಕ್ತಾಯವಾಗುವ ಕವಿತೆಯಲ್ಲಿ ಕವಿ ಜಿ.ಎಸ್.ಶಿವರುದ್ರಪ್ಪನವರು ಕೇಳುವವರಿಗಾಗಿ ಯಾರೂ ಹಾಡುವುದಿಲ್ಲ, ಬದಲಾಗಿ ತಮ್ಮ ಮನದ ತೃಪ್ತಿಗಾಗಿ, ಸಂತೋಷಕ್ಕಾಗಿ ಹಾಡುತ್ತಾರೆ. ಬದುಕಿನಲ್ಲಿ ಆತ್ಮ ತೃಪ್ತಿಯ ಮುಂದೆ ಉಳಿದೆಲ್ಲ ಸಂತಸಗಳು ಗೌಣ ಎಂಬ ಕವಿವಾಣಿ ಅದೆಷ್ಟೋ ನಿಜ ಅಲ್ಲವೇ.

ಪ್ರತಿ ಪುಟ್ಟ ಸಾಮ್ರಾಜ್ಯವು ಕೂಡ ಅದರ ಒಬ್ಬೊಬ್ಬ ಪ್ರಜೆಯಿಂದಲೂ ಆರಂಭವಾಗುತ್ತದೆ. ಪ್ರತಿಯೊಂದು ಆರಂಭ ಆರ್ಭಟಿಸುತ್ತಾ ಬರುವುದಿಲ್ಲ.

ಅತಿ ದೊಡ್ಡ ಮ್ಯಾರಥಾನ್ ಓಟವು ಕೂಡ ಮೊದಲ ಹೆಜ್ಜೆಯಿಂದಲೇ ಪ್ರಾರಂಭ. ಖಾಲಿ ಕುರ್ಚಿಯ ತತ್ವವು ನಮಗೆ ಕಲಿಸುವ ಪಾಠಗಳು ಬಹಳ. ಬದುಕಿನ ಅತ್ಯುತ್ತಮವಾದ ವಿಷಯಗಳು ತುಂಬಿದ ಸಭಾಂಗಣದಲ್ಲಿಯೇ ಹೊರಹೊಮ್ಮಬೇಕೆಂದಿಲ್ಲ. ಅತ್ಯುತ್ತಮಿಕೆ ಎಂಬುದು ಜನರು ನಿಮ್ಮ ಸಭೆಗೆ ಬಂದು ಕುಳಿತುಕೊಳ್ಳುವ ಮುನ್ನ ನೀವು ಯಶಸ್ಸಿನ ಮೊದಲ ಹೆಜ್ಜೆಯನ್ನು ಇಡುವ ಸಮಯದಲ್ಲಿಯೇ ಆರಂಭವಾಗಿರುತ್ತದೆ

ಕಡಿಮೆ ಸಂಖ್ಯೆಯ ಪ್ರೇಕ್ಷಕರು ನಿಜವಾದ ತೊಂದರೆ ಅಲ್ಲವೇ ಅಲ್ಲ ಬದಲಾಗಿ ಕಡಿಮೆ ಪ್ರಯತ್ನಗಳು ನಿಜವಾದ ತೊಂದರೆಯಾಗಿ ಪರಿಣಮಿಸುತ್ತವೆ. ಬೇರೆಯವರು ನಿಮ್ಮನ್ನು ನೋಡಲಿ ಎಂದು ಉತ್ತಮ ಪ್ರದರ್ಶನ ಕೊಡಬೇಡಿ ಬದಲಾಗಿ ನಿಮ್ಮ ತೃಪ್ತಿಗಾಗಿ ಅತ್ಯುತ್ತಮವಾದುದನ್ನು ನೀವು ನೀಡಲು ಪ್ರಯತ್ನಿಸಿ.

ಚಿಕ್ಕ ಪುಟ್ಟ ಆರಂಭಗಳನ್ನು ಸಂಭ್ರಮಿಸಿ.. ಉತ್ಸಾಹದಿಂದ ಎದುರುಗೊಳ್ಳಿ. ನಿಮ್ಮ ಯಶಸ್ಸಿನ ನಾಗಾಲೋಟಕ್ಕೆ ನೀವೇ ಮುನ್ನುಡಿ ಬರೆಯುವಿರಿ.

ಏನಂತೀರಾ ಸ್ನೇಹಿತರೆ?

**–ವೀಣಾ ಹೇಮಂತ್ ಗೌಡ ಪಾಟೀಲ್ ಮುಂಡರಗಿ, ಗದಗ್**

# ಜ್ಞಾನವಾಪಿ ಮಸೀದಿ ಹಿಂದೂಗಳಿಗೆ ಹಸ್ತಾಂತರಿಸಲು ಸಲಹೆ

**ಲಕ್ನೋ,ಡಿ.2–** ಭಾರತೀಯ ಪುರಾತತ್ವ ಸಮೀಕ್ಷೆಯ ಮಾಜಿ ಪ್ರಾದೇಶಿಕ ನಿರ್ದೇಶಕ ಕೆ.ಕೆ. ಮುಹಮ್ಮದ್, ಮಥುರಾ ಮತ್ತು ವಾರಣಾಸಿಯಲ್ಲಿರುವ ಜ್ಞಾನವಾಪಿ ಮಸೀದಿಗಳನ್ನು ಮುಸ್ಲಿಮರು ಹಿಂದೂಗಳಿಗೆ ಹಸ್ತಾಂತರಿಸಬೇಕೆಂದು ಸಲಹೆ ನೀಡಿದ್ದಾರೆ.

ಮೆಕ್ಕಾ ಮತ್ತು ಮದೀನಾ ಮುಸ್ಲಿಮರಿಗೆ ಪವಿತ್ರವಾದಂತೆ ಈ ಎರಡು ಸ್ಥಳಗಳು ಹಿಂದೂಗಳಿಗೆ ಪವಿತ್ರವಾಗಿವೆ ಎಂದು ಹೇಳಿದ್ದಾರೆ

ಮಂದಿರ–ಮಸೀದಿ ವಿವಾದಗಳಲ್ಲಿ ಸಂಯಮ ವಹಿಸುವಂತೆ ಕರೆ ನೀಡಿದ್ದಾರೆ, ರಾಮ ಜನ್ಮಭೂಮಿ, ಮಥುರಾ ಮತ್ತು ಜ್ಞಾನವಾಪಿ ಎಂಬ ಮೂರು ಸ್ಥಳಗಳು ಮಾತ್ರ ಚರ್ಚೆಯ ಕೇಂದ್ರಬಿಂದುವಾಗಿರಬೇಕು ಎಂದು ಹೇಳಿದ್ದಾರೆ.

ಮುಸ್ಲಿಮರು ಈ ಸ್ಥಳಗಳನ್ನು ಸ್ವಇಚ್ಛೆಯಿಂದ ಹಸ್ತಾಂತರಿಸಬೇಕು ಎಂದು ಅವರು ಸೂಚಿಸಿದ್ದಾರೆ,

ಆದರೆ ದೇಶದ ಬೇರೆಡೆ ಇದೇ ರೀತಿಯ ಬೇಡಿಕೆಗಳನ್ನು ಎತ್ತದಂತೆ ಕೆ.ಕೆ. ಮುಹಮ್ಮದ್ ಹಿಂದೂಗಳಿಗೆ ಸಲಹೆ ನೀಡಿದ್ದಾರೆ. ಹಕ್ಕುಗಳ ದೀರ್ಘ ಪಟ್ಟಿಯು ಸಮಸ್ಯೆಯನ್ನು ಉಲ್ಬಣಗೊಳಿಸುತ್ತದೆ ಎಂದಿದ್ದಾರೆ.

ಹಕ್ಕುಗಳನ್ನು ವಿಸ್ತರಿಸುವುದರಿಂದ ಹೆಚ್ಚಿನ ಸಮಸ್ಯೆಗಳು ಉಂಟಾಗುತ್ತವೆ ಎಂದು ಒತ್ತಿ ಹೇಳಿದ್ದಾರೆ. ದೇಶಾದ್ಯಂತ ದೇವಾಲಯ–ಮಸೀದಿ ವಿವಾದಕ್ಕೆ ಸಂಬಂಧಿಸಿದಂತೆ ಹಲವಾರು ಅರ್ಜಿಗಳು ನ್ಯಾಯಾಲಯಗಳಲ್ಲಿ ಬಾಕಿ ಇರುವಾಗ ಮುಹಮ್ಮದ್ ಅವರ ಈ ಹೇಳಿಕೆಗಳು ಬಂದಿವೆ.

ಅಯೋಧ್ಯಾ ವಿವಾದವು ಎಡಪಂಥೀಯ ಪ್ರಚಾರದ ಉತ್ಪನ್ನವಾಗಿದೆ ಎಂದು ಅವರು ಹೇಳಿದ್ದಾರೆ. ಅಯೋಧ್ಯಾ ವಿವಾದದ ಕುರಿತು ಮಾತನಾಡುತ್ತಾ, 1976 ರಲ್ಲಿ ಪ್ರೊಫೆಸರ್ ಬಿ.ಬಿ. ಲಾಲ್ ನೇತೃತ್ವದಲ್ಲಿ ಬಾಬರಿ ಮಸೀದಿಯ ಉತ್ಖನನದಲ್ಲಿ ತಾವು ಭಾಗಿಯಾಗಿದ್ದೆ ಎಂದು ಮುಹಮ್ಮದ್ ವಿವರಿಸಿದ್ದಾರೆ. ಅವರ ಪ್ರಕಾರ, ಮಸೀದಿಯ ಕೆಳಗೆ ದೇವಾಲಯದ ಯಾವುದೇ ಪುರಾತತ್ವ ಶಾಸ್ತ್ರದ ಪುರಾವೆಗಳಿಲ್ಲ ಎಂದು ಮುಸ್ಲಿಂ ಸಮುದಾಯವನ್ನು ಮನವೊಲಿಸಿದ ಕಮ್ಯುನಿಸ್ಟ್ ಇತಿಹಾಸಕಾರರ ಪ್ರಭಾವದಿಂದಾಗಿ ವಿವಾದ ಉಲ್ಬಣಗೊಂಡಿದೆ.



ಅಯೋಧ್ಯೆ ವಿವಾದ ಎಡಪಂಥೀಯ ಪ್ರಚಾರ ಆರಂಭದಲ್ಲಿ, ಹೆಚ್ಚಿನ ಮುಸ್ಲಿಂ ಸಮುದಾಯದವರು ವಿವಾದಿತ ಸ್ಥಳದಲ್ಲಿ ದೇವಾಲಯ ನಿರ್ಮಿಸಲು ಅವಕಾಶ ನೀಡಲು ಸಿದ್ಧರಿದ್ದರು ಎಂದಿರುವ ಕೆ.ಕೆ. ಮುಹಮ್ಮದ್ ಹೇಳಿ ಇತಿಹಾಸಕಾರರು ಸ್ವತಃ ಪುರಾತತ್ವಶಾಸ್ತ್ರಜ್ಞರಲ್ಲ ಮತ್ತು ಉತ್ಖನನ ಸ್ಥಳಕ್ಕೆ ಎಂದಿಗೂ ಭೇಟಿ ನೀಡಿಲ್ಲ ಎಂದಿದ್ದಾರೆ. ಯಾವುದೇ ಮಾಹಿತಿಯಿಲ್ಲದೆ ಸುಳ್ಳು ಕಥೆಗಳನ್ನು ಹರಡುವವರನ್ನು ಮುಹಮ್ಮದ್ ಟೀಕಿಸುತ್ತಿದ್ದರು.

## ಶಬರಿಗಿರಿಗೆ ಪಾದಯಾತ್ರೆ ಆರಂಭಿಸಿದ ಮಾಲಾಧಾರಿಗಳು



**ಮರಿಯಮ್ಮನಹಳ್ಳಿ, ಡಿ.2–** ಪಟ್ಟಣಕ್ಕೆ ಸಮೀಪದ ಲೊಕಪ್ಪನಹೊಲ ಗ್ರಾಮದಿಂದ ಶಬರಿ ಮಲೆಗೆ ಇರುಮುಡಿಯೊಂದಿಗೆ ಏಳು ಮಾಲಾಧಾರಿ ಅಯ್ಯಪ್ಪಸ್ವಾಮಿಗಳು ಪಾದಯಾತ್ರೆ ಆರಂಭಿಸಿದರು.

ಪಟ್ಟಣದ ಗುರುಸ್ವಾಮಿಗಳಾದ ವೀರೇಶ್ ಸ್ವಾಮಿ, ಬ್ರಹ್ಮಾನಂದ ಸ್ವಾಮಿ, ಗುಂಡಾದ ಬಸವರಾಜ ಸ್ವಾಮಿ ಹಾಗೂ ಇತರೆ ಗುರುಸ್ವಾಮಿಗಳು ಶಾಸ್ತ್ರೋಕ್ತವಾಗಿ ಪೂಜಾ ಕೈಂಕರ್ಯಗಳೊಂದಿಗೆ ಇರುಮಡಿ ಕಾರ್ಯಕ್ರಮ ನೆರವೇರಿಸಿದರು.

ಈ ಸಂದರ್ಭದಲ್ಲಿ ಮರಿಯಮ್ಮನಹಳ್ಳಿ, ಲೋಕಪ್ಪನಹೊಲ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಅಯ್ಯಪ್ಪ ಮಾಲಾಧಾರಿಗಳು ಉಪಸ್ಥಿತರಿದ್ದು ಮೊಟ್ಟ ಮೊದಲ ಬಾರಿ ಈ ಭಾಗದಿಂದ ಪಾದಯಾತ್ರೆಗೆ ಹೊರಟ ಅಯ್ಯಪ್ಪ ಮಾಲಾಧಾರಿಗಳಿಗೆ ಹಾರೈಸಿದರು.

# ಕೆಎಚ್‌ಎಂ, ಮಹದೇವಪ್ಪ, ಪರಂಗೆ ಕೊಕ್

**ಚಾಮರಾಜನಗರ, ಡಿ. 2–** ಆಡಳಿತರೂಢ ಕಾಂಗ್ರೆಸ್ ಸರ್ಕಾರದಲ್ಲಿ ಮಂತ್ರಿ ಮಂಡಲ ಪುನರ್‌ರಚನೆಯಾದರೆ, ಸಚಿವರಾದ ಕೆ.ಹೆಚ್.ಮುನಿಯಪ್ಪ, ಎಚ್.ಸಿ. ಮಹದೇವಪ್ಪ ಹಾಗೂ ಡಾ.ಜಿ.ಪರಮೇಶ್ವರ್ ಸೇರಿದಂತೆ ಎಲ್ಲರಿಗೂ ಕೊಕ್ ನೀಡಲಿದೆ ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಸ್ಫೋಟಕ ಹೇಳಿಕೆ ನೀಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ 2ನೇ ಬಾರಿಗೆ ಉಪಹಾರ ಸಭೆ ನಡೆಸಿದ ಬಗ್ಗೆ ಕೊಳ್ಳೇಗಾಲದಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಡಿ.ಕೆ. ಶಿವಕುಮಾರ್, ಯಾವತ್ತು ಸಿದ್ದರಾಮಯ್ಯ ಅವರ ಮನೆಗೆ ಭೇಟಿ ನೀಡಿಲ್ಲ. ಅದೇ ರೀತಿ ಸಿದ್ದರಾಮಯ್ಯ ಕೂಡ ಶಿವಕುಮಾರ್ ನಿವಾಸಕ್ಕೆ ಭೇಟಿ ನೀಡಿಲ್ಲ. ಅಧಿಕಾರ ಆಸೆಗಾಗಿ ಮುಖ್ಯಮಂತ್ರಿ ಕುರ್ಚಿ ಉಳಿಸಿಕೊಳ್ಳಲು ಅವರ ಮನೆಗೆ ಹೋಗಿದ್ದಾರೆ ಎಂದು ವ್ಯಂಗ್ಯವಾಡಿದರು.

ಉಪಹಾರ ಕೂಟ ಕೇವಲ ನೆಪಮಾತ್ರಕ್ಕೆ. ಮನಸ್ಸುಗಳೇ ಬ್ರೇಕ್ ಆಗಿರುವಾಗ ಬ್ರೇಕ್ ಫಾಸ್ಟ್ ತೇಪೆ ಹಚ್ಚುತ್ತಾ ಹೇಳಿ ಎಂದು ಪ್ರಶ್ನಿಸಿದ ಅವರು ರಾಜ್ಯದ ಅಭಿವೃದ್ಧಿ ರೈತರು ಹಾಗೂ ದಲಿತರ ಸಮಸ್ಯೆಗಳ ಬಗ್ಗೆ ಚರ್ಚಿಸದೆ ಕೇವಲ ಉಪಹಾರ ಸಭೆ ಮಾಡಿ ಜನರ ದಾರಿ ತಪ್ಪಿಸಿದ್ದಾರೆ ಎಂದು ಟೀಕಿಸಿದರು.

ಕಾಂಗ್ರೆಸ್‌ನಲ್ಲಿ ದಲಿತರಿಗೆ ಕುರ್ಚಿಯಿಲ್ಲ ಎಂಬುದು ಮತ್ತೆ ಸಾಬೀತಾಗಿದೆ. ದಲಿತರ ಸಮಾಧಿಯನ್ನು ಕಾಂಗ್ರೆಸ್ ಪಕ್ಷ



ಸಂಪೂರ್ಣವಾಗಿ ಕಟ್ಟಿದೆ ಎಂದ ಅವರು ಸಂಪುಟ ಪುನರ್‌ರಚನೆಯಾದರೆ ಪರಮೇಶ್ವರ್, ಮಹದೇವಪ್ಪ ಹಾಗೂ ಮುನಿಯಪ್ಪ ಅವರುಗಳು ಅವರನ್ನು ಸಂಪುಟದಿಂದ ಕೈಬಿಡಲಾಗುತ್ತದೆ. ಎಐಸಿಸಿ ಅಧ್ಯಕ್ಷರಾಗಿರುವ ಮಲ್ಲಿಕಾರ್ಜುನ ಖರ್ಗೆಯವರನ್ನು ದಲಿತ ಮುಖ್ಯಮಂತ್ರಿಯಾಗಿ ಅಗಲು ಬಿಡುವುದಿಲ್ಲ ಎಂದರು.

ಪ್ರಿಯಾಂಕ್ ಖರ್ಗೆ ಯವರನ್ನು ಮುಖ್ಯಮಂತ್ರಿ ಅಥವಾ ಡಿಸಿಎಂ ಮಾಡುತ್ತಾರೆ. ಎಐಸಿಸಿ ಹೈಕಮಾಂಡ್ ಆದರೆ ನಾನು ಈ ಕುರ್ಚಿ ಕಿತ್ತಾಟದ ಬಗ್ಗೆ ಗಮನಕ್ಕೆ ತರುತ್ತೇನೆ ಎಂದು ಹೇಳುತ್ತಾರೆ. ಹೀಗಾಗಿ ಕಾಂಗ್ರೆಸ್ ಪಕ್ಷದಂತಹ ಕೆಟ್ಟ ಪಕ್ಷ ಮತ್ತೊಂದಿಲ್ಲ. ಕಾಂಗ್ರೆಸ್ ಸರ್ವ ನಾಶವಾದರೆ ಸಾರ್ವಜನಿಕರು ಉದ್ಧಾರವಾಗುತ್ತಾರೆ ಎಂದು ಹೇಳಿದರು.

# 43 ಲಕ್ಷ ಮತದಾರರ ಡಿಲೀಟ್‌ಗೆ ಆಯೋಗ ತಯಾರಿ

**ನವದೆಹಲಿ/ಕೋಲ್ಕತ್ತ,ಡಿ2–** ಪಶ್ಚಿಮ ಬಂಗಾಳದಲ್ಲಿ ನಡೆಯುತ್ತಿರುವ "ವಿಶೇಷ ತೀವ್ರ ಪರಿಷ್ಕರಣೆ" (ಎಸ್‌ಐಆರ್) ಯೋಜನೆಯ ಭಾಗವಾಗಿ ಭಾರತ ಚುನಾವಣಾ ಆಯೋಗ (ಇಸಿಐ) ರಾಜ್ಯದಿಂದ ಸುಮಾರು 43.30 ಲಕ್ಷ ಮತದಾರರ ಹೆಸರುಗಳನ್ನು ತೆಗೆದುಹಾಕಲು ತೀರ್ಮಾನಿಸಿದೆ. ಡಿಸೆಂಬರ್ 16ರಂದು ಮತದಾರರ ಪಟ್ಟಿಯ ಮಸೂದೆ ಪ್ರಕಟವಾಗಲಿದೆ.

ಮತದಾರರ ಪಟ್ಟಿಯ ಅಂಕೀಕರಣದ ಪೂರ್ವಾವಲೋಕನದ ಆಧಾರದ ಮೇಲೆ ಈ ಅಂದಾಜು ಮಾಡಲಾಗಿದೆ. ಅಂಕೀಕರಣದ ಕೆಲಸ ಪೂರ್ಣಗೊಂಡಂತೆ ಈ ಸಂಖ್ಯೆ ಇನ್ನೂ ಹೆಚ್ಚುವ ಸಾಧ್ಯತೆಯಿದೆ.ಮುಖ್ಯ ಚುನಾವಣಾ ಅಧಿಕಾರಿ (ಸಿಇಒ) ಕಚೇರಿಯ ಸೂತ್ರಗಳು ತಿಳಿಸುವ ಪ್ರಕಾರ, ಇದರಲ್ಲಿ ಬಹುಪಾಲು ಹೆಸರುಗಳು ಸಹಜ ಕಾರಣಗಳಿಂದ ತೆಗೆಯಲ್ಪಡುತ್ತಿವೆ. ಸುಮಾರು 21.45 ಲಕ್ಷ ಹೆಸರುಗಳು ಸತ್ತ ಮತದಾರರವು. ಸುಮಾರು 15.10 ಲಕ್ಷ ಮತದಾರರು ಇತರ ಪ್ರದೇಶಗಳಿಗೆ ಸ್ಥಳಾಂತರಗೊಂಡಿದ್ದಾರೆ. ಸುಮಾರು 5.5 ಲಕ್ಷ ಮತದಾರರು "ಹುಡುಕಲಾಗದವರು" ಎಂದು ಪರಿಗಣಿತರಾಗಿದ್ದಾರೆ.

ಒಂದು ಲಕ್ಷಕ್ಕಿಂತ ಕಡಿಮೆ ನಮೂದುಗಳು ನಕಲಿ ಅಥವಾ ಫಸ್ಟು ಎಂದು ಗುರುತಿಸಲ್ಪಟ್ಟಿವೆ. "ಹುಡುಕಲಾಗದ" ಮತದಾರರಲ್ಲಿ ಕೆಲವರು ನಂತರ ಗುರುತಿಸಲ್ಪಡಬಹುದು ಎಂದು ಅಧಿಕಾರಿಗಳು ಸೂಚಿಸಿದ್ದಾರೆ.

ರಾಜ್ಯದಾದ್ಯಂತ 2,208 ಮತದಾನ ಕೇಂದ್ರಗಳಲ್ಲಿ ಸತ್ತ, ನಕಲಿ




ಅಥವಾ ಸ್ಥಳಾಂತರಿತ ಮತದಾರರ ಹೆಸರುಗಳು ಸಿಗಲಿಲ್ಲ ಎಂಬ ಅಂಶ ವಿರೋಧ ಪಕ್ಷಗಳಲ್ಲಿ ಪ್ರಶ್ನೆಗಳನ್ನು ಎಬ್ಬಿಸಿದೆ. ಬಿಜೆಪಿ, ಹೇಗೆ ಈಷ್ಟೊಂದು ಕೇಂದ್ರಗಳಲ್ಲಿ ಯಾವುದೇ ಅನಿಯಮಿತತೆ ಇರಲಿಲ್ಲ ಎಂದು ಪ್ರಶ್ನಿಸಿದೆ ಮತ್ತು ಅನುಗುಣವಾದ ಗಣನಾ ಫಾರ್ಮ್ಗಳ ಸೂಕ್ಷ್ಮ ಪರಿಶೀಲನೆ ಕೋರಿದೆ.

ಪಶ್ಚಿಮ ಬಂಗಾಳ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ನವೆಂಬರ್ 26, 27 ಮತ್ತು 28 ರಂದು ಸಲ್ಲಿಸಲಾದ (ಒಟ್ಟು 1.25 ಕೋಟಿ ಫಾರ್ಮ್ಗಳು) ಎಲ್ಲಾ ಗಣನಾ ನಮೂದುಗಳ ಸಮಗ್ರ ತಪಾಸಣೆ ನಡೆಸಲು ಇಸಿಐಗೆ ಲಿಖಿತವಾಗಿ ವಿನಂತಿಸಿದ್ದಾರೆ.ಪಶ್ಚಿಮ ಬಂಗಾಳದ ಒಟ್ಟು ಮತದಾರರ ಸಂಖ್ಯೆ 7,66,37,529 ಇದೆ. ಚುನಾವಣಾ ಪಟ್ಟಿಯ ಶುದ್ಧತೆ ಮತ್ತು ನಿಖರತೆಗಾಗಿ ನಡೆಯುವ ಈ ದೊಡ್ಡ ಮಟ್ಟದ ಪರಿಷ್ಕರಣೆ, ರಾಜಕೀಯ ಸೂಕ್ಷ್ಮತೆಗಳ ಹಿನ್ನೆಲೆಯಲ್ಲಿ, ರಾಜ್ಯದ ಚುನಾವಣಾ ಭೂದೃಶ್ಯವನ್ನು ಮಾರ್ಪಡಿಸಲಿದೆ.

# ಅಸ್ಕಾಹಾಳ, ಕೋಲ್ಡ್ ಸ್ಟೋರೇಜ್ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯ

**ರಾಯಚೂರು,ಡಿ.2–**ಇಲ್ಲಿನ ಜೆಸ್ಕಾಂ ಕಾರ್ಯ ಮತ್ತು ಪಾಲನೆ ವಿಭಾಗ–1ರ ಶಾಖೆ–2ರಲ್ಲಿ ಎಲ್.ಟಿ ಲೈನ್‌ರೋಡ್ ವೈಡ್‌ನಿಂಗ್ ಕಾಮಗಾರಿ ನಿರ್ವಹಿಸುತ್ತಿರುವ ಪ್ರಯುಕ್ತ ಡಿಸೆಂಬರ್ 3ರ ಬೆಳಿಗ್ಗೆ 10 ಗಂಟೆಯಿಂದ ಸಂಜೆ 05 ಗಂಟೆವರೆಗೆ ಅಸ್ಕಾಹಾಳ, ಕೋಲ್ಡ್ ಸ್ಟೋರೇಜ್ ಎದುರುಗಡೆ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಸಹಕರಿಸುವಂತೆ ಕೋರಲಾಗಿದೆ.ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08532–226386 ಅಥವಾ 08532–231999ಗೆ ಸಂಪರ್ಕಿಸುವಂತೆ ಜೆಸ್ಕಾಂ ಕಾರ್ಯ ಮತ್ತು ಪಾಲನೆ ವಿಭಾಗ–1ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಾಲಿಬಾಲ್ ತಂಡಕ್ಕೆ ಕಲ್ಮಠ ಪದವಿ ಮಹಾ ವಿದ್ಯಾಲಯದಿಂದ ಆಯ್ಕೆ

ಯುವಮಾರ್ಗ ಸುದ್ದಿ



**ಮಾನ್ವಿ,ಡಿ.2–**ಇತ್ತೀಚೆಗೆ ಸರಕಾರಿ ಪ್ರಥಮ ದರ್ಜೆ ಕಾಲೇಜು ಶಹಾಪುರ ದಲ್ಲಿ ಜರುಗಿದ ರಾಯಚೂರು ವಿಶ್ವವಿದ್ಯಾಲಯ ರಾಯಚೂರು. ವಾಲಿಬಾಲ್ ತಂಡದ ಆಯ್ಕೆ ಯಲ್ಲಿ ಮಾನವಿ ಪಟ್ಟಣದ ಕಲ್ಮಠದ ಪೂಜ್ಯ ಶ್ರೀ ಸಿದ್ದರಾಮ ಶಿವಾಚಾರ್ಯ ಪದವಿ ಮಹಾವಿದ್ಯಾಲಯದ ಬಿ. ಎ ಮೂರನೇ ಸೆಮಿಸ್ಟರ್ ವಿದ್ಯಾರ್ಥಿ ರವಿಚಂದ್ರ ತಂದೆ ದೊಡ್ಡ ಮುದುಕಪ್ಪ ರಾಯಚೂರು ವಿಶ್ವ ವಿದ್ಯಾಲಯ ತಂಡಕ್ಕೆ ಆಯ್ಕೆ ಆಗಿದ್ದು ವಿದ್ಯಾರ್ಥಿ ಸಾಧನೆಗೆ ಕಲ್ಮಠ ವಿದ್ಯಾ ಸಂಸ್ಥೆ ಅಧ್ಯಕ್ಷರಾದ ಷ. ಬ್ರ.ಶ್ರೀ ವಿರೂಪಾಕ್ಷ ಶಿವಾಚಾರ್ಯ ಸ್ವಾಮೀಜಿ. ಆಡಳಿತಧಿಕಾರಿ ಸಂಗಯ್ಯ ಸ್ವಾಮಿ. ಪ್ರಾಚಾರ್ಯರಾದ. ಸಿದ್ಧಾನಗೌಡ ಪಾಟೀಲ್. ಧೈಹಿಕ ಶಿಕ್ಷಣ ನಿರ್ದೇಶಕ ವಿರುಪಣ್ಣ ಪಾಟೀಲ್. ಉಪನ್ಯಾಸಕರಾದ. ದೇವಪ್ಪ. ಖಾಲಿದ್ ಪಾಶ. ಆನಂದ್ ಕುಮಾರ್ ಉಪ್ಪಳ. ಅಭಿನಂದಿಸಿದ್ದಾರೆ

### ಡಿಸೆಂಬರ್ 6ರಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ವಿಕಲಚೇತನರ ಕುಂದುಕೊರತೆ ಸಭೆ

**ರಾಯಚೂರು,ಡಿ.2–**ವಿಕಲಚೇತನರ ಕುಂದು ಕೊರತೆಗಳನ್ನು ಚರ್ಚಿಸಲು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಡಿಸೆಂಬರ್ 6ರ ಬೆಳಿಗ್ಗೆ 11ಗಂಟೆಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ನಿಗದಿಪಡಿಸಲಾಗಿದ್ದು, ಜಿಲ್ಲೆಯ ವಿಕಲಚೇತನರು ತಮ್ಮ ಅಹವಾಲುಗಳನ್ನು ಸಭೆಯಲ್ಲಿ ಸಲ್ಲಿಸಬಹುದಾಗಿದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಂದ ವಿಶೇಷ ಪ್ರೋತ್ಸಾಹಧನಕ್ಕೆ ಅರ್ಜಿ ಆಹ್ವಾನ

**ರಾಯಚೂರು,ಡಿ.2–**ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ 2025–26ನೇ ಸಾಲಿನಲ್ಲಿ ಬಿ.ಎಡ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹಧನ ನೀಡಲು ಸೇವಾಸಿಂಧು ಪೋರ್ಟಲನಲ್ಲಿ ಅರ್ಜಿ ಆಹ್ವಾನಿಸಲಾಗಿದೆ. ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿಯಿಂದ ಮಾನ್ಯತೆ ಪಡೆದಿರುವ ಸರ್ಕಾರಿ/ಅರೆ ಸರ್ಕಾರಿ/ಅನುದಾನಿತ ಹಾಗೂ ಖಾಸಗಿ ಕಾಲೇಜುಗಳಲ್ಲಿ ದಾಖಲಾತಿ ಹೊಂದಿರುವ (ಮುಸ್ಲಿಂ ಕ್ರಿಶ್ಚಿಯನ್,ಜೈನ್ ಸಿಖ್,ಬೌದ್ಧ್ ಹಾಗೂ ಪಾರ್ಸಿ) ವಿದ್ಯಾರ್ಥಿಗಳಿಗೆ 25000 ರೂ.ಗಳ ವಿಶೇಷ ಪ್ರೋತ್ಸಾಹಧನ ಸಂಬಂಧಪಟ್ಟ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಡಿಬಿಟಿ ಮುಖಾಂತರ ಜಮಾ ಮಾಡಲಾಗುವುದು.

ಈ ಬಿ.ಎಡ್ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ಸಮುದಾಯದ ಅರ್ಹ ವಿದ್ಯಾರ್ಥಿಗಳಿಗೆ ಸೇವಾ ಸಿಂಧು ಪೋರ್ಟಲ್‌ನ ಆನ್‌ಲೈನ್‌ನಲ್ಲಿ https://sevasindhu.karnataka.gov.in ನಲ್ಲಿ ಡಿಸೆಂಬರ್ 31ರೊಳಗಾಗಿ ಪ್ರೋತ್ಸಾಹಧನಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ.ಹೆಚ್ಚಿನ ಮಾಹಿತಿಗಾಗಿ ಇಲಾಖಾ ಸಹಾಯವಾಣಿ ಸಂಖ್ಯೆ:– 8277799990 ಹಾಗೂ ಇಲಾಖಾ ವೆಬ್ ಸೈಟ್ ವಿಳಾಸ: https://dom.karnataka.gov.in ಸಂಪರ್ಕಿಸಬಹುದಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಕೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದತ್ತ ಮಂದಿರದಲ್ಲಿ ಇಂದು ಸಾಂಸ್ಕೃತಿಕ ಉತ್ಸವ, ಶ್ರೀ ಗುರು ಪ್ರಶಸ್ತಿ ಪ್ರದಾನ

**ಔರಾದ್,ಡಿ.2–** ಪಟ್ಟಣದ ಶ್ರೀ ದತ್ತ ಸಾಯಿ ಶನೇಶ್ವರ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಇಂದು ಸಾಯಂಕಾಲ 5 ಗಂಟೆಗೆ ಸಾಂಸ್ಕೃತಿಕ ಉತ್ಸವ ಹಾಗೂ ಶ್ರೀ ಗುರು ಪ್ರಶಸ್ತಿ ಪ್ರದಾನ ಜರುಗಲಿದೆ ಎಂದು ಪೂಜ್ಯ ಶಂಕರಲಿಂಗ ಶಿವಾಚಾರ್ಯ ಸ್ವಾಮೀಜಿ ತಿಳಿಸಿದ್ದಾರೆ.ಪ್ರತಿ ವರ್ಷದಂತೆ ದತ್ತ ಜಯಂತಿ ಪ್ರಯುಕ್ತ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮ ಅದ್ದೂರಿಯಾಗಿ ಜರುಗಲಿದೆ ಪಟ್ಟಣದ ವಿವಿಧ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ, ನೃತ್ಯ, ನಾಟಕ, ಜಾನಪದ, ಹಾಸ್ಯ ಸಂಗೀತ ಸೇರಿದಂತೆ ಹಲವು ಸ್ಪರ್ಧೆಗಳು ಜರುಗಲಿದೆ.

ಅತ್ಯುತ್ತಮ ಪ್ರದರ್ಶನ ನೀಡಿದ ತಂಡಕ್ಕೆ ಪ್ರಥಮ 11000, ದ್ವಿತೀಯ 7000, ತೃತೀಯ 5000 ನಗದು ಬಹುಮಾನದ ಜೊತೆಗೆ ಪಾರಿತೋಷಕ ನೀಡಲಾಗುವುದು ಹಾಗೂ ಸಾಂಸ್ಕೃತಿಕ ಉತ್ಸವ ಕಾರ್ಯಕ್ರಮದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹನೀಯರಿಗೆ ಶ್ರೀ ಗುರು ಪ್ರಶಸ್ತಿ ನೀಡಿ ಗೌರವಿಸಲಾಗುವುದು, ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ತಿಳಿಸಿದ್ದಾರೆ.

# ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ಯುವ ಘಟಕದಿಂದ ವಕೀಲರಿಗೆ ಸನ್ಮಾನ



ಯುವಮಾರ್ಗ ಸುದ್ದಿ

**ಮಾನ್ವಿ,ಡಿ.2–** ತಾಲೂಕು ವಕೀಲರ ಸಂಘದ ಚುನಾವಣೆಯಲ್ಲಿ ಗೆಲವು ಸಾಧಿಸುವ ಮೂಲಕ ಎರಡನೇ ಬಾರಿಗೆ ಅಧ್ಯಕ್ಷ ಸ್ಥಾನಕ್ಕೆ ಪುನರಾಯ್ಕೆಯಾದ ರವಿಕುಮಾರ ಪಾಟೀಲ್ , ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಶಿವಪ್ಪ ನಾಯಕ ಸುಂಕನೂರು,ಜಂಟಿ ಕಾರ್ಯದರ್ಶಿ ಸ್ಥಾನಕ್ಕೆ ನಾಗರಾಜ ನಾಯಕ ಗೂಗಲ್ ಅವರು ವಕೀಲರ ಚುನಾವಣೆಯಲ್ಲಿ ಗೆಲವು ಸಾಧಿಸಿದ ಅವರಿಗೆ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ಯುವ ಘಟಕ ಜಿಲ್ಲಾಧ್ಯಕ್ಷರಾದ ಶರಣಬಸವ ನಾಯಕ ಜಾನೇಕಲ್ ನೇತೃತ್ವದಲ್ಲಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಸಮಾಜದ ಹಿರಿಯ ಮುಖಂಡರಾದ ಬುಡ್ಡಪ್ಪನಾಯಕ,ತಿಮ್ಮನಗೌಡ ವಕೀಲರು ಯಲ್ಲಪ್ಪ ನಾಯಕ, ಮಹದೇವ ದದ್ದಲ್, ಅಂಬಣ್ಣ ನಾಯಕ,ಕೃಷ್ಣ ನಾಯಕ, ನಾಯ್ಡು , ಹನುಮೇಶ ನಾಯಕ, ಶಿವರಾಜ ಹರವಿ, ವಿನೋದ್ ನಾಯಕ, ,ಗಿರಿನಾಯಕ ,ನಾಗರಾಜ ನಾಯಕ, ಶ್ರೀಕಾಂತ್ , ಚಂದ್ರು ದೊರೆ , ಬಸವ ನೀರಮಾನ್ವಿ, ಬಸವ ಜಾಟಗಲ್ ಹನುಮೇಶ ದೊರೆ ನೀರಮಾನ್ವಿ , ಹನುಮೇಶ ಜನತಾ ಹೌಸ್ , ಚಿದಾನಂದ ನಾಯಕ , ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು

# ಏಡ್ಸ್ ಜಾಗೃತಿ ಕಾರ್ಯಕ್ಕೆ ನಾವೆಲ್ಲ ಕೈಜೋಡಿಸೋಣ:ಸ್ಮೀತಾ ಅಕ್ಕ ಸಲಹೆ

ಯುವಮಾರ್ಗ ಸುದ್ದಿ

**ರಾಯಚೂರು,ಡಿ.2–** ಆಕಸ್ಮಿಕವಾಗಿಯಾಗಲಿ ಅಥವಾ ಜೀವನದ ತಪ್ಪು ಹೆಜ್ಜೆಗಳಿಂದಾಗಲಿ ವ್ಯಕ್ತಿಯು ಹೆಚ್‌ಐವಿ ಸೋಂಕಿಗೆ ಒಳಗಾಗಿ ಜೀವನದ ಸುಂದರ ಕ್ಷಣಗಳನ್ನು ದೂರ ಮಾಡಿಕೊಳ್ಳುವ ದುರದೃಷ್ಟಕರ ಸನ್ನಿವೇಶಗಳಿಂದ ಪಾರಾಗಲು ಇರುವ ಸುರಕ್ಷತಾ ಕ್ರಮಗಳ ಜಾಗೃತಿ ಕಾರ್ಯಕ್ಕೆ ನಾವೆಲ್ಲರೂ ಕೈಜೋಡಿಸಬೇಕೆಂದು ಪ್ರಜಾಪೀತ ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾಲಯದ ಸ್ಮೀತಾ ಅಕ್ಕ ಮನವಿ ಮಾಡಿದರು.

ಸೋಮವಾರ ಸಂಜೆ ನಗರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಿಮ್ಸ್ ನರ್ಸಿಂಗ್ ಕಾಲೇಜು, ಡ್ಯಾಪ್ಕೋ ಹಾಗೂ ಹೊಸಬೆಳಕು ಸಂಸ್ಥೆ ಸಹಯೋಗದಲ್ಲಿ ಹೆಚ್‌ಐವಿ ಜಾಗೃತಿಯ ಮೇಣದ ಬತ್ತಿಯೊಂದಿಗೆ ಜಾಗೃತಿ ನಡಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಸಮುದಾಯದಲ್ಲಿ ಏಡ್ಸ್ ಪಸರಿಸದಂತೆ ಎಚ್ಚರ ವಹಿಸುವುದು ಮತ್ತು ಜನತೆಗೆ ತಿಳಿ ಹೇಳುವುದು ನಮ್ಮೆಲ್ಲರ ಮಹತ್ವದ ಕಾರ್ಯವಾಗಬೇಕಿದೆ. ಇದು ಒಬ್ಬರಿಂದ ಸಾಧ್ಯವಾದುದಲ್ಲ. ಯುವ ಜನತೆಯು ಇದರಲ್ಲಿ ಪ್ರಮುಖ ಪಾತ್ರ ವಹಿಸಬೇಕಿದೆ ಎಂದರು.

ಈ ವೇಳೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಸುರೇಂದ್ರ ಬಾಬು ಅವರು ಮತನಾಡಿ, ಕಳೆದ ನಾಲ್ಕು ದಶಕಗಳಿಂದ ಸರಕಾರವು ಸಂಘ–ಸಂಸ್ಥೆಗಳ ಸಹಕಾರದೊಂದಿಗೆ ನಾನಾ ಕಾರ್ಯಕ್ರಮ ರೂಪಿಸಿದೆ.




ಸೋಂಕಿಗೆ ಒಳಗಾದಾಗ ಅನುಭವಿಸುವ ಆರೋಗ್ಯ ಸಮಸ್ಯೆಗಳ ಗಂಭೀರತೆಯನ್ನು ಜನತೆಗೆ ಮನವರಿಕೆ ಮಾಡಿಕೊಡುತ್ತಿದೆ. ಹದಿಹರೆಯದವರ ಭವಿಷ್ಯದ ದೃಷ್ಟಿಯಿಂದ ಇಂದಿನಿಂದಲೇ ನಾವು ಜೀವನ ಜೋಪಾನಕ್ಕಾಗಿ ಅರಿವಿನ ಬತ್ತಿ ಹಚ್ಚೋಣ ವೆಂದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ನಂದಿತಾ ಎಂ ಎನ್, ಜಿಲ್ಲಾ ಸರ್ವೇಕ್ಷಣಾ ಅಧಿಕಾರಿ ಡಾ.ಗಣೇಶ ಕೆ., ಕುಟುಂಬ ಕಲ್ಯಾಣ ಕಾರ್ಯಕ್ರಮ ಅಧಿಕಾರಿ ಡಾ.ಶಿವಕುಮಾರ ನಾರಾ, ಮನೋವೈದ್ಯ ಡಾ.ಮನೋಹರ ಪತ್ತಾರ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ, ಜಿಲ್ಲಾ ಡ್ಯಾಪ್ಕೊ ಮೇಲ್ವಿಚಾರಕ ಮಲ್ಲಯ್ಯ ಮಠಪತಿ, ರಿಮ್ಸ್ ನರ್ಸಿಂಗ್ ಕಾಲೇಜಿನ ಬೋಧಕರಾದ ಸಂತೋಷಕುಮಾರ, ಹೊಸ ಬೆಳಕು ಸಂಸ್ಥೆಯ ಅಧ್ಯಕ್ಷ ಅಮರಯ್ಯ ಸ್ವಾಮಿ, ದೇವರಾಜ್, ಜಿಲ್ಲಾ ಕ್ಷಯರೋಗ ಮೇಲ್ವಿಚಾರಕರ ಅಮರೇಶ, ಎಂಟಿಎಸ್ ಸಂಧ್ಯಾ ಸೇರಿದಂತೆ ಕ್ಷಯರೋಗ, ಡ್ಯಾಪ್ಕೋ, ಎಆರ್‌ಟಿ ಸಿಬ್ಬಂದಿಯರು, ಆಶಾ ಕಾರ್ಯಕರ್ತೆಯರು, ನರ್ಸಿಂಗ್ ವಿದ್ಯಾರ್ಥಿನಿಯರು ಇದ್ದರು.

# ಹನುಮಮಾಲಾಧಾರಿಗಳಿಂದ ಭವ್ಯ ಸಂಕೀರ್ತನ ಶೋಭಾ ಯಾತ್ರೆ ಹಾಗೂ ಪಲ್ಲಕ್ಕಿ ಉತ್ಸವ

ಯುವಮಾರ್ಗ ಸುದ್ದಿ

**ಮಾನ್ವಿ,ಡಿ.2–** ಪಟ್ಟಣದಲ್ಲಿ ವಿಶ್ವ ಹಿಂದೂ ಪರಿಷತ್ ,ಭಜರಂಗದಳ ಮಾನ್ವಿ ಘಟಕ ವತಿಯಿಂದ ಶ್ರೀ ಹನುಮಾಲಾ ಕಾರ್ಯಕ್ರಮ–2025 ಅಂಗವಾಗಿ ನಡೆದ ಭವ್ಯ ಸಂಕೀರ್ತನ ಶೋಭಾ ಯಾತ್ರೆ ಹಾಗೂ ಪಲ್ಲಕ್ಕಿ ಉತ್ಸವ ಕಾರ್ಯಕ್ರಮಕ್ಕೆ ಪಟ್ಟಣದ ವಾಸವಿ ಕಲ್ಯಾಣ ಮಂಟಪ್ಪದ ಆವರಣದಲ್ಲಿ ಜೆಡಿಎಸ್,ರಾಜ್ಯ ಯುವ ಘಟಕದ ಉಪಾಧ್ಯಕ್ಷರಾದ ರಾಜಾ ರಾಮಚಂದ್ರನಾಯಕ ಚಾಲನೆ ನೀಡಿ ಮಾತನಾಡಿ ಪ್ರತಿ ವರ್ಷ ದಂತೆ ಈ ವರ್ಷ ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಶ್ರೀ ಹನುಮಮಾಲೆಯನ್ನು ಹಾಗೂ ಅಯ್ಯಪ್ಪ ಮಾಲೆಯನ್ನುಧರಿಸಿದ ಸಾವಿರಾರು ಭಕ್ತರು ಭಕ್ತಿ ಶ್ರದ್ದೆಗಳಿಂದ ಭಾಗವಹಿಸಿದ್ದರೆ ಎಂದು ತಿಳಿಸಿದರು.

ವಾಸವಿ ಕಲ್ಯಾಣ ಮಂಟಪ್ಪ ದಿಂದ ಎ.ಪಿ.ಎಂ.ಸಿ.



ಶ್ರೀ ಉದ್ಭವ ಆಂಜನೇಯ್ಯ ಸ್ವಾಮಿ ದೇವಸ್ಥಾನದ ವರೆಗೆ ಭವ್ಯ ಸಂಕೀರ್ತನ ಶೋಭಾ ಯಾತ್ರೆ ಹಾಗೂ ಪಲ್ಲಕ್ಕಿ ಉತ್ಸವ ನಡೆಯಿತು. ನಂತರ ಭಕ್ತರಿಗೆ ಅನ್ನದಾನ ಪ್ರಸಾದ ವ್ಯವಸ್ಥೆ ಮಾಡಲಾಯಿತು.

# ಕನಕ ಮೂರ್ತಿಗೆ ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ ಮಾಲಾರ್ಪಣೆ

ಯುವಮಾರ್ಗ ಸುದ್ದಿ

**ಕವಿತಾಳ:** ಪಟ್ಟಣಕ್ಕೆ ಸೋಮವಾರ ಭೇಟಿ ನೀಡಿದ ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ ಅವರು ಇಲ್ಲಿನ ಕನಕ ನಗರದಲ್ಲಿ ಭಾನುವಾರ ಅನಾವರಣಗೊಂಡ ಕನಕ ಮೂರ್ತಿಗೆ ಮಾಲಾರ್ಪಣೆ ಮಾಡಿದರು .ಮುಖಂಡರಾದ ಟಿ.ಮಲ್ಲಿಕಾರ್ಜುನಗೌಡ ಬಲ್ಲಟಗಿ, ಈರಣ್ಣ ಮರ್ಲಟ್ಟಿ, ನಾಗರಾಜ ಭೋಗಾವತಿ, ಯಮನಪ್ಪ ದಿನ್ನಿ, ಕರಿಯಪ್ಪ ದಿನ್ನಿ, ಶಿವನಪ್ಪ ದಿನ್ನಿ, ನಿಂಗಪ್ಪ ತೋಳ, ರಂಜಿತ್, ರುಕ್ಕುದ್ದೀನ್, ಮಾಜಿ ಪಟ್ಟಣ ಪಂಚಾಯಿತಿ ಸದಸ್ಯರು ಖಾಜಾಪಾಶಾ ಬ್ಯಾಗವಾಟ್, ಮಗ್ದುಂ ಅಲೀ, ಸಣ್ಣ ಕಿರಿಲಿಂಗಪ್ಪ, ಲಕ್ಷ್ಮೀಪತಿ, ಲಾಳೇಶ ನಾಯಕ, ಸದ್ದಾಂ ಖುರೇಷಿ ಮತ್ತಿತರರು ಉಪಸ್ಥಿತರಿದ್ದರು.



### ಜಿಲ್ಲೆಯಲ್ಲಿ ಸಚಿವರಾದ ಬಿ.ಎಸ್.ಸುರೇಶ ಪ್ರವಾಸ

**ರಾಯಚೂರು,ಡಿ.2–** ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರಾದ ಬಿ.ಎಸ್. ಸುರೇಶ ಅವರು ಡಿಸೆಂಬರ್ 3ರಂದು ರಾಯಚೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ.ಬೆಳಿಗ್ಗೆ 10 ಗಂಟೆಗೆ ಬಳ್ಳಾರಿ ಜಿಲ್ಲೆಯ ತೋರಣಗಲ್ಲು ಜಿಂದಾಲ್ ಏರ್‌ಸ್ಟ್ರಿಪ್ ನಿಂದ ಹೆಲಿಕ್ಯಾಪ್ಟರ್ ಮುಖಾಂತರ ಹೊರಟು, ಬೆಳಿಗ್ಗೆ 11 ಗಂಟೆಗೆ ರಾಯಚೂರಿಗೆ ಆಗಮಿಸಲಿದ್ದಾರೆ.ಬೆಳಿಗ್ಗೆ 11 ರಿಂದ, ಯರಮರಸ್, ಮಾವಿನಕೆರೆ ಸೇರಿದಂತೆ ವಿವಿಧೆಡೆ ಭೇಟಿ ಕಾರ್ಯಕ್ರಮದ ಬಳಿಕ, ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದಂತೆ ಪ್ರಗತಿ ಪರಿಶೀಲನಾ ಸಭೆ ನಡೆಸುವರು. ಮಧ್ಯಾಹ್ನ 3 ಗಂಟೆಗೆ ರಾಯಚೂರಿನಿಂದ ನಿರ್ಗಮಿಸಿ ಕೇಂದ್ರ ಸ್ಥಾನ ಬೆಂಗಳೂರಿಗೆ ಪ್ರಯಾಣ ಬೆಳೆಸಲಿದ್ದಾರೆ ಎಂದು ಸಚಿವರ ಆಪ್ತ ಕಾರ್ಯದರ್ಶಿ ಡಾ.ದೇವರಾಜ ಬಿ. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಲಿಂಗಸೂಗೂರು, ಹಟ್ಟಿಯಲ್ಲಿ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ ಪ್ರವಾಸ

**ರಾಯಚೂರು,ಡಿ.2–** ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ ಅವರು ಡಿಸೆಂಬರ್ 3ರಂದು ರಾಯಚೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ.ಡಿಸೆಂಬರ್ 3ರ ಬೆಳಿಗ್ಗೆ 7 ಗಂಟೆಗೆ ಕಲಬುರಗಿ ನಗರದಿಂದ ನಿರ್ಗಮಿಸಿ ಬೆಳಿಗ್ಗೆ 11ಕ್ಕೆ ರಾಯಚೂರು ಜಿಲ್ಲೆಯ ಲಿಂಗಸುಗೂರು ನಗರಕ್ಕೆ ಆಗಮಿಸಿ ಖಾಸಗಿ ಕಾರ್ಯಕ್ರಮದಲ್ಲಿ ಭಾಗಿಯಾಗುವರು.ಮಧ್ಯಾಹ್ನ 1.30ಕ್ಕೆ ಲಿಂಗಸುಗೂರದಿಂದ ನಿರ್ಗಮಿಸಿ, ಮಧ್ಯಾಹ್ನ 2 ಗಂಟೆಗೆ ಹಟ್ಟಿ ಚಿನ್ನದ ಗಣಿ ಪ್ರದೇಶಕ್ಕೆ ಆಗಮಿಸಿ ಮಹಿಳಾ ಕಾರ್ಮಿಕರೊಂದಿಗೆ ಸಂವಾದ ನಡೆಸುವರು. ಮಧ್ಯಾಹ್ನ 3.30ಕ್ಕೆ ಹಟ್ಟಿಯಿಂದ ನಿರ್ಗಮಿಸಿ ಲಿಂಗಸೂರಗೆ ತೆರಳಿ ಸಂಜೆ 4 ಗಂಟೆಗೆ ಲಿಂಗಸಗೂರು ಪೊಲೀಸ್ ಠಾಣೆಗೆ ಭೇಟಿ ನೀಡುವರು. ಬಳಿಕ ಲಿಂಗಸುಗೂರಿನ ಸಮಾಜ ಕಲ್ಯಾಣ ಇಲಾಖೆಯ ಪದವಿ ಮಟ್ಟದ ಬಾಲಕಿಯರ ವಸತಿ ನಿಲಯಕ್ಕೆ ಭೇಟಿ ನೀಡುವರು. ಲಿಂಗಸೂಗೂರನಿಂದ ಸಂಜೆ 6.30ಕ್ಕೆ ನಿರ್ಗಮಿಸಿ ರಾಯಚೂರು ನಗರಕ್ಕೆ ಆಗಮಿಸಿ, ರಾತ್ರಿ 11 ಗಂಟೆಗೆ ರಾಯಚೂರಿನಿಂದ ರೈಲು ಮಾರ್ಗವಾಗಿ ಕೇಂದ್ರ ಸ್ಥಾನ ಬೆಂಗಳೂರಿಗೆ ಪ್ರಯಾಣ ಬೆಳೆಸುವರು ಎಂದು ಅಧ್ಯಕ್ಷರ ಆಪ್ತ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಲ್ಪಸಂಖ್ಯಾತರ ಇಲಾಖೆಯಿಂದ ಸರಳ ವಿವಾಹ ಸಹಾಯಧನಕ್ಕೆ ಅರ್ಜಿ

**ರಾಯಚೂರು,ಡಿ.2–** ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ 2025–26ನೇ ಸಾಲಿನ ಆರ್ಥಿಕವಾಗಿ ಹಿಂದುಳಿದಿರುವ ಅಲ್ಪಸಂಖ್ಯಾತ ಸಮುದಾಯದವರ ಸರಳ ವಿವಾಹಗಳ ವೆಚ್ಚಗಳಿಗಾಗಿ ಪ್ರತಿ ಜೋಡಿಗೆ 50 ಸಾವಿರ ರೂ. ಸಹಾಯಧನಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.ಸರ್ಕಾರದ ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ 222 ರಲ್ಲಿ ಘೋಷಿಸಿರುವಂತೆ ಆರ್ಥಿಕವಾಗಿ ಹಿಂದುಳಿದಿರುವ ಅಲ್ಪಸಂಖ್ಯಾತ ಸಮುದಾಯದವರ ಸರಳ ವಿವಾಹಗಳ ವೆಚ್ಚಗಳಿಗಾಗಿ ನೀಡುವ ಕಾರ್ಯಕ್ರಮವನ್ನು ಷರತ್ತಿಗೊಳಪಟ್ಟು ಅನುಷ್ಠಾನಗೊಳಿಸಲು ಸರ್ಕಾರದ ಮಂಜೂರಾತಿ ನೀಡಿ ಆದೇಶಿಸಲಾದೆ.**ಷರತ್ತುಗಳು:** ಅರ್ಜಿ ಸಲ್ಲಿಸುವ ವಧು–ವರರು ಕರ್ನಾಟಕ ರಾಜ್ಯಕ್ಕೆ ಸೇರಿದ ಅಲ್ಪಸಂಖ್ಯಾತರ ಸಮುದಾಯಗಳಿಗೆ (ಮುಸ್ಲಿಂ, ಕ್ರಿಶ್ಚಿಯನ್,ಜೈನ್,ಬೌದ್ಧ, ಸಿಖ್ ಮತ್ತು ಪಾರ್ಸಿ) ಸೇರಿದವರಾಗಿರಬೇಕು. ಸಾಮೂಹಿಕ ವಿವಾಹಗಳಲ್ಲಿ ಕನಿಷ್ಠ 05 ಜೋಡಿಗಳು ಭಾಗವಹಿಸಿರತಕ್ಕದ್ದು. ಜಿಲ್ಲಾ ನೋಂದಣಿ/ವಕ್ಫ್ ಬೋರ್ಡ್ ಕಚೇರಿಗಳಲ್ಲಿ ಸಾಮೂಹಿಕ ವಿವಾಹಗಳ ಆಯೋಜಕರೆಂದು ನೋಂದಣಿಯಾಗಿರುವ ಖಾಸಗಿ ಟ್ರಸ್ಟಗಳು, ದೇವಸ್ಥಾನದ ಟ್ರಸ್ಟಗಳು, ಸಂಘಗಳು, ಸೊಸೈಟಿಗಳು ವಕ್ಫ ಸಂಸ್ಥೆಗಳು ಮತ್ತು ಖಾಸಗಿ ವ್ಯಕ್ತಿಗಳು ನಡೆಸುವ ಸಾಮೂಹಿಕ ವಿವಾಹ ಕಾರ್ಯಕ್ರಮಗಳಲ್ಲಿ ವಿವಾಹವಾದಲ್ಲಿ ಮಾತ್ರ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ. ಈ ಸೌಲಭ್ಯ ಪಡೆಯುವ ವಧುವಿಗೆ ಕನಿಷ್ಠ 18 ವರ್ಷದಿಂದ ಗರಿಷ್ಠ 42 ವರ್ಷಗಳು, ವರನಿಗೆ ಕನಿಷ್ಠ 21 ವರ್ಷದಿಂದ ಗರಿಷ್ಠ 45 ವರ್ಷ ವಯಸ್ಸು ಆಗಿರತಕ್ಕದ್ದು. ಈ ಯೋಜನೆಯಡಿ ಸಹಾಯಧನ ಪಡೆಯಲು ವಧು–ವರರ ವಾರ್ಷಿಕ ಆದಾಯವು 2.50 ಲಕ್ಷರೂ.ಗಳು ಮತ್ತು ಒಟ್ಟಾರೆಯಾಗಿ 5 ಲಕ್ಷ ರೂ.ಗಳನ್ನು ಮೀರತಕ್ಕದ್ದಲ್ಲ. ಈ ಸೌಲಭ್ಯವನ್ನು ಜೀವನದಲ್ಲಿ ಒಮ್ಮೆ ಮಾತ್ರ ಪಡೆಯಬಹುದಾಗಿದೆ. ಒಂದು ಕುಟುಂಬದಲ್ಲಿ ಒಬ್ಬರಿಗೆ ಮಾತ್ರ ಈ ಯೋಜನೆಯ ಸೌಲಭ್ಯ ನೀಡತಕ್ಕದ್ದು.ವರನಿಗೆ ಈಗಾಗಲೇ ಜೀವಂತ ಪತ್ನಿಯಿದ್ದಲ್ಲಿ ಅಥವಾ ವಧುವಿಗೆ ಜೀವಂತ ಪತಿ ಇದ್ದಲ್ಲಿ ಈ ಯೋಜನೆಯು ಅನ್ವಯಿಸುವುದಿಲ್ಲ. ಸದರಿ ಸಾಮೂಹಿಕ ವಿವಾಹವು ಇತರೆ ಜಿಲ್ಲೆಗಳಲ್ಲಿ ನಡೆದಿದ್ದಲ್ಲಿ ಸಂಬಂಧಪಟ್ಟ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆರವರು ದೃಡೀಕರಿಸುವುದು. ವಧು–ವರರು ಕನಿಷ್ಠ ಏಳು ದಿನ ಮುಂಚಿತವಾಗಿ ವಾಸ್ತವ್ಯವಿರುವ ಜಿಲ್ಲೆಯಲ್ಲಿಯೇ ಅರ್ಜಿ ಸಲ್ಲಿಸತಕ್ಕದ್ದು.ಅರ್ಜಿ ಸಲ್ಲಿಸುವ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಆನ್‌ಲೈನ್‌ನಲ್ಲಿ ನಡೆಸಲಾಗುತ್ತಿದ್ದು, ಅದಾಗ್ಯೂ ಕೆಲವು ಸ್ವಯಂ ಸೇವೆ ಸಂಸ್ಥೆಗಳು ಮತ್ತು ಅರ್ಜಿದಾರರು ತಾಂತ್ರಿಕ ಕಾರಣಗಳಿಂದ ಆನ್‌ಲೈನ್ ಅರ್ಜಿ ಸಲ್ಲಿಸಲು ತೊಂದರೆ ಉಂಟಾದಲ್ಲಿ ಅಂತಹ ಸಂದರ್ಭದಲ್ಲಿ ಮಾತ್ರ ಅನುಮೋದಿತ ಆಫ್‌ಲೈನ್ ಅರ್ಜಿ ನಮೂನೆಗಳನ್ನು ಜಿಲ್ಲಾ ಅಥವಾ ತಾಲ್ಲೂಕು ಕಚೇರಿಯಿಂದ ಪಡೆದು ಸಲ್ಲಿಸಬಹುದಾಗಿದೆ.ಹೆಚ್ಚಿನ ಮಾಹಿತಿಗಾಗಿ ಮಾಹಿತಿ ಕೇಂದ್ರಗಳಾದ ರಾಯಚೂರು: 9731028420, ದೇವದುರ್ಗ: 9148233616, ಲಿಂಗಸುಗೂರು: 9886447863, ಮಾನವಿ: 887334758 ಹಾಗೂ ಸಿಂಧನೂರು: 8217621732ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H